# ಬಿಜಾಪುರ ಜಿಲ್ಲೆಯ ಕಿರು ಪರಿಚಯ

## ಮುನ್ನುಡಿ

ಪ್ರವಾಸವು ಶಿಕ್ಷಣದ ಮಹತ್ವದ ಅಂಗ. 'ದೇಶ ಸುತ್ತು-ಕೋಶ ಓದು' ಎಂಬ ನಾಣ್ಣುಡಿಯಂತೆ ಮನುಷ್ಯನ ಜೀವನ ಓದಿನಿಂದ ಮಾತ್ರ ಪರಿಪೂರ್ಣವಾಗದೆ ಅನೇಕ ವಿಧ್ಯಮಯ ಸ್ಥಳಗಳಿಗೆ ಭೇಟಿ ನೀಡಿ ಪಡೆದುಕೊಳ್ಳುವ ನೈಜ ಅನುಭವದಿಂದ ಮಾತ್ರ ಜೀವನ ಸಾರ್ಥಕವಾಗುತ್ತದೆ ಪ್ರವಾಸದಿಂದ ಜ್ಞಾನ ಬಂಥಾರವನ್ನು ಹೆಚ್ಚಿಸಿಕೊಳ್ಳಬಹುದು. ಸರ್ವಶಿಕ್ಷಣ ಅಭಿಯಾನದಡಿಯಲ್ಲಿ ಚಿಣ್ಣರ ಕರ್ನಾಟಕ ದರ್ಶನ ಕಾರ್ಯಕ್ರಮವು ಕರ್ನಾಟಕದಲ್ಲಿ ಹಲವು ವರ್ಷಗಳಿಂದ ಅನುಷ್ಠಾನದಲ್ಲಿದೆ. ಪ್ರಸಕ್ತ ಸಾಲಿನಲ್ಲಿ ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರ ಸಲಹೆಯಂತೆ ಸ್ವಲ್ಪ ಬದಲಾವಣೆಗೊಳಪಟ್ಟು ಚಿಣ್ಣರ ಜಿಲ್ಲಾದರ್ಶನವಾಗಿ ರೂಪುಗೊಂಡಿದೆ. ಅದರಂತೆ ಮಕ್ಕಳು ತಮ್ಮ ಜಿಲ್ಲೆಯೊಳಗಿನ ಐತಿಹಾಸಿಕ-ಧಾರ್ಮಿಕ ಪ್ರೇಕಣೀಯ ಸ್ಥಳಗಳು, ಭೌಗೋಲಿಕ ಪ್ರದೇಶಗಳು, ಕವಿಗಳು ಜನಿಸಿದ ಸ್ಥಳಗಳು ನದಿಗಳು, ಉದ್ದಿಮೆಗಳು ಇತ್ಯಾದಿಗಳ ಸ್ಥೂಲ ಪರಿಚಯವನ್ನೊಳಗೊಂಡ ಕೈಪಿಡಿಯನ್ನು ಸಿದ್ಧಪಡಿಸಲಾಗಿದೆ. ಮಕ್ಕಳನ್ನು ಪ್ರವಾಸಕ್ಕೆ ಕರೆದೊಯ್ಯುವಾಗ ಮಾರ್ಗದರ್ಶನಕ್ಕಾಗಿ ಶಿಕ್ಷಕರು-ಮಕ್ಕಳು ಬಳಸಲು ಸೂಕ್ತವಾದ ರೀತಿಯಲ್ಲಿ ಇದನ್ನು ರಚಿಸಲಾಗಿದೆ.

ಈ ಕೈಪಿಡಿಯನ್ನು ರಚಿಸಲು ಪೂರಕ ಮಾಹಿತಿ ಹಾಗೂ ಚಿತ್ರಗಳನ್ನು ಪೂರೈಸಿದ ಜಿಲ್ಲೆಯ ವಿವಿಧ ತಾಲೂಕುಗಳ ಬಿ.ಆರ್.ಸಿ. ಹಾಗೂ ಅವರ ಸಿಬ್ಬಂದಿ ವರ್ಗದವರಿಗೂ, ಡಯಟನಲ್ಲಿ ಏರ್ಪಡಿಸಿದ ಕೈಪಿಡಿಯ ಸಾಹಿತ್ಯ ರಚನಾ ಕಾರ್ಯಾಗಾರದಲ್ಲಿ ಭಾಗವಹಿಸಿದ ಡಯಟ್‌ನ ಸಿ.ಎಂ.ಡಿ.ಇ. ವಿಭಾಗದ ಅಧಿಕಾರಿಗಳು ಹಾಗೂ ಸಾಹಿತ್ಯ ರಚನಾ ತಂಡದ ಎಲ್ಲಾ ಸಂಪನ್ಮೂಲ ವ್ಯಕ್ತಿಗಳಿಗೂ ಕೃತಜ್ಞತೆಗಳು

**ಬಿ.ವ್ಹಿ. ರಾಜೇಂದ್ರಪ್ರಸಾದ**
ಉಪನಿರ್ದೇಶಕರು (ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ
ವಿಜಾಪುರ

**ಕೆ.ಹೆಚ್. ಕಾಕನೂರ**
ಮುಖ್ಯ ಕಾರ್ಯನಿರ್ವಾಹಕ
ಅಧಿಕಾರಿಗಳು ಜಿಲ್ಲಾ ಪಂಚಾಯತ್,
ವಿಜಾಪುರ

**ಸಿ.ವ್ಹಿ. ಹಿರೇಮಠ**
ಉಪನಿರ್ದೇಶಕರು (ಅಭಿವೃದ್ಧಿ)
ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ
ವಿಜಾಪುರ

# ಸಹಸ್ರಫಣಿ ಜೈನಮಂದಿರ

ದೂರ : ಕೇಂದ್ರ ಬಸ್ ನಿಲ್ದಾಣದಿಂದ-೫ ಕಿ.ಮೀ.



ಕೇಂದ್ರ ಬಸ್ ನಿಲ್ದಾಣದಿಂದ ಪಶ್ಚಿಮಕ್ಕೆ ೫ ಕಿ.ಮೀ. ದೂರದಲ್ಲಿ ಕ್ರಿ.ಶ. ೫ನೇ ಶತಮಾನಕ್ಕೆ ಸೇರಿದ “ಸಹಸಫಣಿ ಪಾರ್ಶ್ವನಾಥ ಬಸದಿ” ಆಕರ್ಷಕವಾಗಿದೆ. ಈ ಬಸದಿಯು ಚೌಕಾಕಾರವಾಗಿದ್ದು, ಅರೆಮೆರಗುಗೊಳಿಸಿದ ಕಲ್ಲುಗಳಿಂದ ಕಟ್ಟಲಾಗಿದೆ. ದಕ್ಷಿಣದ ಸಣ್ಣ ಪ್ರವೇಶದ್ವಾರವು ಆಯತಾಕಾರದ ಸಭಾಂಗಣಕ್ಕೆ ಒಯ್ದು ಅದು ದೇವಸ್ಥಾನದ ಪಶ್ಚಿಮ ಗೋಡೆಯುದ್ದಕ್ಕೂ ಇರುವ ದೇವಾಲಯದ ಬಾಗಿಲುಗಳವರೆಗೂ ಚಾಚಿಕೊಂಡಿದೆ. ಇಲ್ಲಿ ಮೂರು ಜಿನ ಮೂರ್ತಿಗಳಿದ್ದು, ಮಧ್ಯದಲ್ಲಿಯ ಮೂರ್ತಿ ಸಹಸ್ರಫಣಿ ಪಾರ್ಶ್ವನಾಥರದಾಗಿದೆ.

ಪಾರ್ಶ್ವನಾಥನ ತುದಿಯ ಹೆಡೆಗೆ ಹಾಲು ಎರೆದರೆ ಆ ಹಾಲು ೧೦೦೮ ಹೆಡೆಗಳ ಮುಖಾಂತರ ಹರಿದು ಬಂದು, ಪಾರ್ಶ್ವನಾಥನ ಮಸ್ತಕ ಮತ್ತು ಭುಜಗಳ ಮೇಲೆ ಬೀಳುವ ರೀತಿ ವಿಸ್ಮಯವಾಗಿದೆ.

## ನರಸಿಂಹ ದೇವಸ್ಥಾನ



ಇದು ಕೇಂದ್ರ ಬಸ್‌ನಿಲ್ದಾಣದ ಹತ್ತಿರ ಇದೆ. ಇದನ್ನು ಎರಡನೆ ಇಬ್ರಾಂಹಿಮ್ ಆದಿಲ್‌ಶಾಹ ಕಟ್ಟಿಸಿದನೆಂದು ಮತ್ತು ಇದರಲ್ಲಿ ಪೂಜೆ ಸಲ್ಲಿಸಿದನೆಂದು ಹೇಳಲಾಗುತ್ತದೆ. ಈ ದೇವಾಲಯ ಹಿಂದು-ಮುಸ್ಲಿಂರ ಭಾವೈಕ್ಯತೆಯ ಸಂಕೇತವಾಗಿದೆ. ಇದನ್ನು ಇತ್ತೀಚೆಗೆ ನವೀಕರಿಸಲಾಗಿದೆ.

## ಆಕಾಶವಾಣಿ ಕೇಂದ್ರ ವಿಜಾಪುರ



ಇದು ಮಹಾತ್ಮ ಗಾಂಧಿ ವೃತ್ತದಿಂದ ೪ ಕಿ. ಮೀ. ಅಂತರದಲ್ಲಿ ಅಥಣಿಗೆ ಹೋಗುವ ಮಾರ್ಗದಲ್ಲಿ ಎಡಕ್ಕೆ ವರ್ತುಲ ರಸ್ತೆಯಲ್ಲಿದೆ ಕೇಂದ್ರ ಸರಕಾರವು ಸ್ಥಾಪಿಸಿದ 'ಪ್ರಸಾರ ಭಾರತಿ'ಯ ಮೊದಲ ಮಗುವಾಗಿ ದಿನಾಂಕ : ೧೮-೦೯-೧೯೯೭ ರಂದು ಎಫ್.ಎಮ್. ಬ್ಯಾಂಡಿನಲ್ಲಿ ಕಾರ್ಯನಿರ್ವಹಿಸುವ ಕೇಂದ್ರವಾಗಿ ಆರಂಭವಾಗಿದೆ.

ಕೆಲವು ಸ್ವಂತ ಕಾರ್ಯಕ್ರಮಗಳನ್ನು ಸಿದ್ಧಪಡಿಸಿ ಪ್ರಸಾರಮಾಡುವದರೊಂದಿಗೆ ದೆಹಲಿ, ಬೆಂಗಳೂರು, ಮುಂಬೈ ವಿವಿಧಭಾರತಿ ಕೆಂದ್ರಗಳ ಕಾರ್ಯಕ್ರಮಗಳನ್ನು ಮರು ಪ್ರಸಾರ ಮಾಡುತ್ತದೆ. ೨x೩ ಕಿ.ವ್ಯಾ. ಪ್ರಸಾರ ಸಾಮರ್ಥ್ಯ ಹೊಂದಿರುವ ಇದರ ಪ್ರಸಾರವು ಸುಮಾರು ೮೦. ಕಿ.ಮೀ. ದೂರದವರೆಗೂ ಕೇಳಿಬರುತ್ತದೆ.

ಇದು ಕೃಷಿ, ಜಾನಪದ ಕಲೆ, ಶಿಕ್ಷಣ, ಸಾಹಿತ್ಯ, ಸಂಗೀತ, ಮನರಂಜನೆ ಹಾಗೂ ಮಕ್ಕಳ ಕಾರ್ಯಕ್ರಮಗಳಲ್ಲಿ ಜಿಲ್ಲೆಯ ಸ್ಥಳೀಯ ಪ್ರತಿಭೆಗಳಿಗೆ ಹೆಚ್ಚೆಚ್ಚು ಅವಕಾಶ ನೀಡುತ್ತದೆ.

**ಸೂಚನೆ :** ಮಕ್ಕಳನ್ನು ಸಂದರ್ಶನಕ್ಕೆ ಕರೆದೊಯ್ಯುವವರು ಮುಂಚಿತವಾಗಿ ಸ್ಟೇಶನ್ ಇಂಜಿನೀಯರ್ ಇವರ ಲಿಖಿತ ಅನುಮತಿ ಪಡೆಯಬೇಕು.

## ಸೈನಿಕ ಶಾಲೆ

ಸ್ಥಾಪನೆ : ೧೬-೦೯-೧೯೬೩

ದೂರ: ಕೇಂದ್ರ ಬಸ್ ನಿಲ್ದಾಣದಿಂದ-೪ ಕಿ.ಮೀ.





ಕೇಂದ್ರ ಬಸ್ ನಿಲ್ದಾಣದಿಂದ ಪಶ್ಚಿಮಕ್ಕೆ ೪ ಕಿ.ಮೀ. ದೂರದಲ್ಲಿರುವ ಸೈನಿಕ ಶಾಲೆಯು ಒಂದು ಮುಖ್ಯ ಶಿಕ್ಷಣ ಸಂಸ್ಥೆಯಾಗಿದೆ. ಇದು ಕರ್ನಾಟಕ ರಾಜ್ಯದ ಏಕೈಕ ಸೈನಿಕ ಶಿಕ್ಷಣ ನೀಡುವ ಶಾಲೆಯಾಗಿದೆ. ಕರ್ನಾಟಕದ ವಿದ್ಯಾರ್ಥಿಗಳನ್ನು ೬ನೇ ತರಗತಿಗೆ ಪ್ರವೇಶ ಪರೀಕ್ಷೆ ಮೂಲಕ ಇಲ್ಲಿ ಆಯ್ಕೆ ಮಾಡಲಾಗುತ್ತದೆ. ಕೇಂದ್ರ ಪಠ್ಯವಸ್ತುವಿನ ಬೋಧನೆ ಇಲ್ಲಿ ಜರುಗುತ್ತಿದ್ದು, ದೇಶಕ್ಕೆ ಧಿರೋದಾತ್ತ ಸೈನಿಕರನ್ನು ತಯಾರಿಸುವ ಶಿಕ್ಷಣವನ್ನು ಇಲ್ಲಿ ನೀಡಲಾಗುತ್ತದೆ. ಪ್ರತಿ ವರ್ಷ ೯೦ ರಿಂದ ೧೦೦ ಬಾಲಕರನ್ನು ಮೆರಿಟ್ ಆದಾರದ ಮೇಲೆ ಸೇರಿಸಿಕೊಳ್ಳಲಾಗುತ್ತದೆ. ಒಮ್ಮೆ ಸೇರಿದ ಮಕ್ಕಳು ೧೨ನೇ ತರಗತಿಯವರೆಗೆ ಶಿಕ್ಷಣ ಪಡೆಯುತ್ತಾರೆ. ಸಧ್ಯ ೬೨೪ ಬಾಲಕರು ಶಿಕ್ಷಣ ಪಡೆಯುತ್ತಿದ್ದಾರೆ.

ಸೂಚನೆ : ಶಾಲೆಯನ್ನು ಸಂದರ್ಶಿಸುವರು ಪ್ರಾಚಾರ್ಯರ ಪೂರ್ವಾನುಮತಿ ಪಡೆಯಬೇಕಾಗುತ್ತದೆ.

# ವಿಜಾಪುರ ಗ್ರಾಮೀಣ

## ತೊರವಿ

**ದೂರ / ಮಾರ್ಗ**

ವಿಜಾಪುರ ನಗರದಿಂದ : ೬ ಕಿ. ಮೀ.

ಮಾರ್ಗ : ವಿಜಾಪುರದಿಂದ ಅಥಣಿ



'ತೊರವಿ' ವಿಜಾಪುರದಿಂದ ಪಶ್ಚಿಮಕ್ಕೆ ೬ ಕಿ.ಮೀ. ಅಂತರದಲ್ಲಿ ಅಥಣಿಗೆ ಹೋಗುವ ಮಾರ್ಗದಲ್ಲಿರುವ ಗ್ರಾಮ. ಈ ಗ್ರಾಮದಲ್ಲಿ ಪ್ರಾಚೀನ ಶ್ರೀಲಕ್ಷ್ಮೀ ನರಸಿಂಹ ದೇವಸ್ಥಾನವಿದೆ. ಈ ದೇವಸ್ಥಾನ ಗುಹಾಂತರ ದೇವಾಲಯದಂತೆ ಗೋಚರಿಸುತ್ತದೆ. ಆಕರ್ಷಕವಾದ ನರಸಿಂಹ ವಿಗ್ರಹ ಗಮನ ಸೆಳೆಯುತ್ತದೆ.

೧೫ ನೇ ಶತಮಾನದಲ್ಲಿ ನರಹರಿ ಎಂಬ ಕವಿ, 'ಕುಮಾರ ವಾಲ್ಮೀಕಿ' ಎಂಬ ಹೆಸರಿನಿಂದ ನರಸಿಂಹ ದೇವಸ್ಥಾನದಲ್ಲಿಯೇ ಕುಳಿತು 'ತೊರವಿ ರಾಮಾಯಣ'ವನ್ನು ರಚಿಸಿದ ಎಂಬ ಪ್ರತೀತಿ ಇದೆ. 'ತೊರವಿ ರಾಮಾಯಣ'ಕೃತಿಯನ್ನು ದೇವಸ್ಥಾನದ ಒಳ ಆವರಣದಲ್ಲಿ ಪ್ರದರ್ಶನಕ್ಕಿಡಲಾಗಿದ್ದು ಕೃತಿಯಲ್ಲಿನ ಸಾಲುಗಳನ್ನು ದೇವಾಲಯದ ಒಳ ಆವರಣದಲ್ಲಿ ಬರೆಯಲಾಗಿದೆ.

ತೊರವಿಯಲ್ಲಿ ಪುರಾತನ ಕಾಲದ ಲಕ್ಷ್ಮೀ ದೇವಸ್ಥಾನವನ್ನು ವೀಕ್ಷಿಸಬಹುದು ಇತ್ತೀಚೆಗೆ ಪ್ರಾರಂಭವಾದ ದ್ರಾಕ್ಷಿ ಸಂಸ್ಕರಣದ ಘಟಕಕ್ಕೆ ಭೇಟಿ ನೀಡಬಹುದು.

## ನವರಸಪುರ – ಸಂಗೀತ ಮಹಲ



ಶ್ರೀ ಲಕ್ಷ್ಮಿ ನರಸಿಂಹ ದೇವಸ್ಥಾನ

ತೊರವಿ ಗ್ರಾಮಕ್ಕೆ ಹೊಂದಿಕೊಂಡಂತೆ ಈ ಸ್ಮಾರಕವಿದೆ. ಕಮಾನದ ರಚನೆ ಹೊಂದಿದ ಭವ್ಯ ಕಟ್ಟಡದ ಅವಶೇಷಗಳಿರುವ ಮಹಲ. ಇದನ್ನು ಎರಡನೇ ಇಬ್ರಾಹಿಮ್ ಆದಿಲ್‌ಶಾಹಿಯು ಸಂಗೀತ ಕಚೇರಿ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ನಡೆಸುವ ಸಲುವಾಗಿ ನಿರ್ಮಿಸಿದ್ದ. ಈಗಲೂ ಜಿಲ್ಲಾಡಳಿತ 'ನವರಸಪುರ ಸಂಗೀತ ಉತ್ಸವ' ಎಂಬ ಜಿಲ್ಲಾ ಮಟ್ಟದ ಉತ್ಸವವನ್ನು ನಡೆಸುತ್ತದೆ.

## ಕರ್ನಾಟಕ ಮಹಿಳಾ ವಿಶ್ವವಿದ್ಯಾಲಯ



ತೊರವಿ ಗ್ರಾಮದ ಸಮೀಪದಲ್ಲಿಯೇ, ರಾಜ್ಯದ ಏಕೈಕ ವಿಶ್ವವಿದ್ಯಾನಿಲಯವಾಗಿ ಕರ್ನಾಟಕ ಮಹಿಳಾ ವಿಶ್ವವಿದ್ಯಾನಿಲಯವು ತಲೆ ಎತ್ತಿ ನಿಂತಿದೆ. ಮಹಿಳೆಯರನ್ನು ಶಿಕ್ಷಣದಿಂದ ಸಶಕ್ತರನ್ನಾಗಿಸುವ ಹಾಗೂ ಸಮಾಜದ ಮುಖ್ಯವಾಹಿನಿಯಲ್ಲಿ ತರುವ ಧ್ಯೇಯದೊಂದಿಗೆ ೨೦೦೩ ರಲ್ಲಿ ಸ್ಥಾಪಿತವಾದ ಇದರಲ್ಲಿ ಪ್ರಸ್ತುತ ೧೫ ಸ್ನಾತಕೋತ್ತರ ವಿಭಾಗಗಳು ಕಾರ್ಯನಿರ್ವಹಿಸುತ್ತಿವೆ. ರಾಜ್ಯದ ವಿವಿಧ ಭಾಗಗಳ ಮಹಿಳಾ ವಿದ್ಯಾರ್ಥಿನಿಯರು ಇಲ್ಲಿ ಉನ್ನತ ಶಿಕ್ಷಣ ಪಡೆಯುತ್ತಿದ್ದಾರೆ.

## ಕುಮಟಗಿ

**ದೂರ / ಮಾರ್ಗ**

ವಿಜಾಪುರ ನಗರದಿಂದ : ೧೯ ಕಿ. ಮೀ.

ಮಾರ್ಗ : ವಿಜಾಪುರದಿಂದ ಸಿಂದಗಿ



ಇದು ಆದಿಲ್‌ಶಾಹಿ ಅರಸರ ವಿಹಾರ ತಾಣದ ಅವಶೇಷಗಳಿರುವ ಸ್ಥಳ. ಕುಮಟಗಿ ಗ್ರಾಮದ ಸಮೀಪವಿರುವ ಕೆರೆಯ ಬದಿಯಲ್ಲಿ ಸ್ಮಾರಕಗಳ ಸಮುಚ್ಚಯವಿದೆ. ಪಾತರಗಿತ್ತಿ ಮಹಲ, ಜಲ ಕ್ರೀಡಾಂಗಣ, ಮಹಲಿನ ಒಳಗೋಡೆಯ ಮೇಲಿನ ಚಿತ್ರಗಳು ಆಕರ್ಷಕವಾಗಿವೆ. ನೀರಿನ ಕಾಲುವೆಗಳು, ಕೊಳವೆಗಳು ಗಮನ ಸೆಳೆಯುತ್ತವೆ.

## ಕಾಖಂಡಕಿ

**ದೂರ / ಮಾರ್ಗ**

ವಿಜಾಪುರ ನಗರದಿಂದ ೩೦ ಕಿ.ಮೀ

ಮಾರ್ಗ - ವಿಜಾಪುರದಿಂದ ಜಮಖಂಡಿ



ಶ್ರೀ ಮಹಾಪತಿದಾಸರ ವೃಂದಾವನ

ಜಿಲ್ಲೆಯಲ್ಲಿ ಯೋಗಿಗಳೆಂದು ಖ್ಯಾತಿಹೊಂದಿದವರು ಕಾಖಂಡಕಿಯ ಶ್ರೀಮಹಿಪತಿದಾಸರು. ಎರಡನೇ ಅಲಿ ಆದಿಲ್‌ಶಾಹಿ (ಕ್ರಿ.ಶ.೧೬೫೬-ಕ್ರಿ.ಶ.೧೬೭೨) ವಿಜಾಪುರವನ್ನು ಆಳುತ್ತಿದ್ದ ಕಾಲದಲ್ಲಿ ಬಾದಶಹನ ಆಸ್ಥಾನದಲ್ಲಿ ದಿವಾನರಾಗಿದ್ದ ಶ್ರೀಮಹಿಪತಿರಾಯರು ಸಾರವಾಡದ ಶ್ರೀಭಾಸ್ಕರ ಸ್ವಾಮಿಗಳ ಅನುಗ್ರಹಕ್ಕೆ ಒಳಗಾಗಿ ಅಗ್ರಹಾರವಾಗಿದ್ದ ಕಾಖಂಡಕಿಗೆ ಬಂದು ಯೋಗಸಾಧನೆ, ಅನುಷ್ಠಾನದಲ್ಲಿ ತೊಡಗಿ ಆಧ್ಯಾತ್ಮಿಕ ಲೋಕದಲ್ಲಿ ಉನ್ನತ ಶಿಖರಕ್ಕೆ ತಲುಪಿದರು. ಕನ್ನಡ, ಮರಾಠಿ, ಹಿಂದಿ ಮಿಶ್ರಭಾಷೆಗಳಲ್ಲಿ ಅನೇಕ ಕೀರ್ತನೆಗಳನ್ನು ರಚಿಸಿ ಶ್ರೇಷ್ಠ ದಾಸರಾಗಿದ್ದಾರೆ. ಕಾಖಂಡಕಿಯಲ್ಲಿ ಶ್ರೀಮಹಿಪತಿದಾಸರ, ಶ್ರೀಕೃಷ್ಣರಾಯರ ವೃಂದಾವನಗಳಿವೆ.

## ನಂದಿ ಸಕ್ಕರೆ ಕಾರ್ಖಾನೆ

**ದೂರ / ಮಾರ್ಗ**

ವಿಜಾಪುರ ನಗರದಿಂದ - ೫೨ ಕಿ.ಮೀ.

ಮಾರ್ಗ - ವಿಜಾಪುರದಿಂದ -ಗಲಗಲಿ



ಈ ಕಾರ್ಖಾನೆಯು ವಿಜಾಪುರದಿಂದ ೫೨ ಕಿ. ಮೀ ಅಂತರದಲ್ಲಿ ಗಲಗಲಿಗೆ ಹೋಗುವ ಮಾರ್ಗದಲ್ಲಿದೆ. ವಿಜಾಪುರ ಜಿಲ್ಲೆಯಲ್ಲಿ ಸ್ಥಾಪಿತವಾಗಿರುವ ಪ್ರಪ್ರಥಮ ಸಕ್ಕರೆ ಕಾರ್ಖಾನೆ. ಕಬ್ಬು ಬೆಳೆಗಾರರಿಗೆ ಈ ಕಾರ್ಖಾನೆ ವರದಾನವಾಗಿದ್ದು, ರೈತರ ಅನುಕೂಲಕ್ಕಾಗಿ ಕೃಷಿ ಸಂಶೋಧನೆ ಹಾಗೂ ಅಭಿವೃದ್ಧಿ ವಿಭಾಗವನ್ನು ಪ್ರಾರಂಭಿಸಿದೆ. ೧೮.೧೪ ಮೆಗಾವ್ಯಾಟ್ ಸಾಮರ್ಥ್ಯದ ವಿದ್ಯುತ್ ಉತ್ಪಾದನಾ ಘಟಕವನ್ನು ಹೊಂದಿದೆ. ಸಕ್ಕರೆ ಉತ್ಪಾದನಾ ವಿಧಾನವನ್ನು ಮಕ್ಕಳಿಗೆ ಇಲ್ಲಿ ಪರಿಚಯಿಸಬಹುದಾಗಿದೆ.

# ಬಸವನ ಬಾಗೇವಾಡಿ

**ದೂರ:** ಜಿಲ್ಲಾ ಕೇಂದ್ರದಿಂದ-೪೩ ಕಿ.ಮೀ.



ಬಸವೇಶ್ವರ ದೇವಾಲಯ

ಬಸವನ ಬಾಗೇವಾಡಿ ಪಟ್ಟಣವು ಜಿಲ್ಲಾ ಕೇಂದ್ರ ವಿಜಾಪುರದಿಂದ ಪೂರ್ವ ದಿಕ್ಕಿಗೆ ೪೩ ಕಿ.ಮೀ. ದೂರದಲ್ಲಿದೆ. ಪಟ್ಟಣದ ಪ್ರಮುಖ ದೇವಾಲಯವೆಂದರೆ "ಮೂಲನಂದೀಶ್ವರ"ನ ದೇವಾಲಯವಾಗಿದೆ. ೧೨ನೇ ಶತಮಾನಕ್ಕೂ ಹಳೆಯದಾದ ಈ ದೇವಾಲಯದ ಒಳಗೆ ಸಂಗಮೇಶ್ವರ ದೇವಾಲಯವೂ ಇದೆ ಹಾಗೂ ಬಸವಣ್ಣ, ಅಕ್ಕಮಹಾದೇವಿ, ನೀಲಾಂಬಿಕೆ ಮುಂತಾದವರ ವಿಗ್ರಹಗಳನ್ನು ಇಲ್ಲಿ ಕಾಣಬಹುದಾಗಿದೆ. ದೇವಾಲಯದ ಪ್ರವೇಶದ್ವಾರದಲ್ಲಿ ಬಲಕ್ಕೆ ಇರುವ ಶಿಲಾಶಾಸನಗಳು ಗಮನಾರ್ಹವಾಗಿವೆ. ಈ ದೇವಾಲಯದ ಹೊರವಲಯದ ಪ್ರಾಂಗಣವು ವಿಶಾಲವಾಗಿದ್ದು, ಅದಕ್ಕೆ ಹೊಂದಿಕೊಂಡಂತೆ "ಬಸವ ವೇದಿಕೆ" ಹಾಗೂ "ಬಸವತೀರ್ಥ" ಪ್ರವಾಸಿಗರ ಪ್ರೇಕ್ಷಣೀಯ ಸ್ಥಳಗಳಾಗಿವೆ.

# ಬಸವ ಸ್ಮಾರಕ



ಜಗಜ್ಯೋತಿ ಶ್ರೀ ಬಸವೇಶ್ವರರು



ಬಸವನ ಬಾಗೇವಾಡಿಯಲ್ಲಿ ಪಟ್ಟಣದ ಮಧ್ಯಭಾಗದಲ್ಲಿರುವ ಬಸವಣ್ಣನವರು ಜನಿಸಿದ ಮನೆಯನ್ನು "ಕೂಡಲ ಸಂಗಮ ಅಭಿವೃದ್ಧಿ ಪ್ರಾಧಿಕಾರ"ದ ಅಡಿಯಲ್ಲಿ "ಬಸವ ಸ್ಮಾರಕ"ವಾಗಿ ನಿರ್ಮಾಣ ಮಾಡಲಾಗಿದೆ. ಸದರಿ ಬಸವ ಸ್ಮಾರಕವು ಊರಿನ ಮಧ್ಯಭಾಗದಲ್ಲಿದ್ದು, ಅದರ ಒಳಾಂಗಣ ವಿಶಾಲವಾಗಿ ನಿರ್ಮಾಣವಾಗಿದೆ. ಅದರ ಒಳಗೆ ಮೂರ್ತಿ ಶಿಲಾರೂಪಕಗಳಿದ್ದು, ಅವು ಬಸವಣ್ಣನವರ ಬಾಲ್ಯದಿಂದ ಹಿಡಿದು ಐಕ್ಯವಾಗುವವರೆಗಿನ ಸಾಧನೆಗಳನ್ನು, ಸಂಗತಿಗಳನ್ನು ತಿಳಿಸಿ ಕೊಡುತ್ತವೆ. ಬಸವ ಸ್ಮಾರಕದ ಆಧುನಿಕ ಶೈಲಿಯ ಕಟ್ಟಡವೂ ಪ್ರವಾಸಿಗರ ಮನಸೂರೆಗೊಳ್ಳುತ್ತವೆ.

## ಇಂಗಳೇಶ್ವರ

## ಶ್ರೀರೇವಣಸಿದ್ಧೇಶ್ವರ ಮಂದಿರ (ಇಂಗಳೇಶ್ವರ ಗುಡ್ಡ)

**ದೂರ:**

ಜಿಲ್ಲಾ ಕೇಂದ್ರದಿಂದ-೪೫ ಕಿ.ಮೀ.

ತಾಲೂಕ ಕೇಂದ್ರದಿಂದ-೧೧ ಕಿ.ಮೀ.





ವಚನ ಶಿಲಾ ಮಂಟಪ

ಇಂಗಳೇಶ್ವರವು ವಿಜಾಪುರದಿಂದ ಪೂರ್ವಕ್ಕೆ ೪೫ ಕಿ.ಮೀ. ದೂರದಲ್ಲಿದ್ದು, ಇದು ಬಸವಣ್ಣನವರ ತಾಯಿ ಮಾದಲಾಂಬಿಕೆಯ ತವರು ಮನೆಯಾಗಿದೆ. ಇಂಗಳೇಶ್ವರವು ಒಂದು ಐತಿಹಾಸಿಕವಾದ ಅಗ್ರಹಾರವಾಗಿತ್ತು. ಅದು ಹಲವಾರು ಐತಿಹಾಸಿಕ ಐತಿಹ್ಯಗಳನ್ನು ಹೊಂದಿದೆ. ಊರಿನ ಹೊರ ವಲಯದಲ್ಲಿರುವ "ಗುಡ್ಡದ ರೇವಣಸಿದ್ಧೇಶ್ವರ ದೇವಾಲಯ"ವು ಒಂದು ಪ್ರಮುಖವಾದ ದೇವಾಲಯವಾಗಿದೆ. ಅದೇ ರೀತಿ

ಗ್ರಾಮದಲ್ಲಿ ಕಲ್ಮೇಶ್ವರ, ಸೋಮೇಶ್ವರ, ನಾರಾಯಣ, ಸಂಗಮೇಶ್ವರ ದೇವಾಲಯಗಳಿದ್ದು, ಇವುಗಳ ಪೈಕಿ ಶೋಬನದೇವರ ಗುಡಿಯನ್ನು ಕ್ರಿ.ಶ.೧೧೨೮ರಲ್ಲಿ ನೀಲಕಂಠನಾಯಕನೆಂಬ ಅಧಿಕಾರಿಯು ನಿರ್ಮಿಸಿದನೆಂದು ಶಾಸನಗಳಿಂದ ತಿಳಿಯುತ್ತದೆ.



ಹರ್ಡೇಕರ ಮಂಜಪ್ಪನವರು

ಅದೇ ರೀತಿಯಾಗಿ ಊರಿನಲ್ಲಿ ನೂತನವಾಗಿ "ವಚನ ಶಿಲಾ ಮಂಟಪ"ವನ್ನು ನಿರ್ಮಿಸಲಾಗಿದೆ. ಇಲ್ಲಿ ಬಸವಾದಿ ಶರಣರ ಸುಮಾರು ೪೩,೦೦೦ ವಚನಗಳನ್ನು ಕಲ್ಲಿನಲ್ಲಿ ಕೆತ್ತಿಸಲಾಗಿದೆ. ಇದರಿಂದಾಗಿ ವಚನಗಳ ಪರಂಪರೆ ಮುಂದಿನ ಪೀಳಿಗೆಗೆ ಹರಿದು ಬರಲು ಸಹಾಯಕವಾಗಿದೆ. ಆಲಮಟ್ಟಿಯು "ಕರ್ನಾಟಕದ ಗಾಂಧೀ" ಎಂದು ಚಿರಪರಿಚಿತರಾಗಿದ್ದ ಹರ್ಡೇಕರ ಮಂಜಪ್ಪನವರ ತಪೋಭೂಮಿಯಾಗಿರುವುದು ವಿಶೇಷವಾಗಿದೆ. ವಚನ ಸಾಹಿತ್ಯವನ್ನು ಸಂಶೋಧಿಸಿ, ಪರಿಷ್ಕರಿಸಿ, ಕನ್ನಡ ಸಾರಸ್ವತ ಲೋಕಕ್ಕೆ ಒದಗಿಸಿದ ಕೀರ್ತಿಯು ಹರ್ಡೇಕರ ಮಂಜಪ್ಪನವರಿಗೆ ಸಲ್ಲುತ್ತದೆ. ಇವರ ಸಮಾಧಿ ಸ್ಮಾರಕ ಆಲಮಟ್ಟಿ ಡ್ಯಾಮಸೈಟ್‌ನಲ್ಲಿರುವ ಎಂ.ಎಚ್.ಎಮ್. ಪ. ಪೂ. ಕಾಲೇಜಿನ ಆವರಣದಲ್ಲಿದೆ.

## ಮುತ್ತಗಿ

**ದೂರ:**

ಜಿಲ್ಲಾ ಕೇಂದ್ರದಿಂದ-೪೦ ಕಿ.ಮೀ.

ತಾಲೂಕ ಕೇಂದ್ರದಿಂದ-೧೫ ಕಿ.ಮೀ.







ಮುತ್ತಗಿಯು ಒಂದು ಪ್ರಾಚೀನ ಅಗ್ರಹಾರವಾಗಿದ್ದು, ವಿಜಾಪುರದಿಂದ ಪೂರ್ವಕ್ಕೆ ೪೦ ಕಿ.ಮೀ. ಹಾಗೂ ಬಸವನ ಬಾಗೇವಾಡಿಯಿಂದ ೧೦ ಕಿ.ಮೀ. ದೂರದಲ್ಲಿದೆ. ಮುತ್ತಗಿಯಲ್ಲಿ ಬಾದಾಮಿ ಹಾಗೂ ಕಲ್ಯಾಣದ ಚಾಲುಕ್ಯರ ಕಾಲದ ದೇವಾಲಯಗಳು ಹಾಗೂ ಶಾಸನಗಳು ಕಂಡುಬರುತ್ತವೆ.

ಮುಖ್ಯವಾಗಿ "ಶಿವ ದೇವಾಲಯ"ವು ನಮ್ಮ ಗಮನ ಸೆಳೆಯುತ್ತದೆ. ಪ್ರವೇಶದ್ವಾರ, ನವರಂಗ, ಗರ್ಭಗೃಹ ಇವು ಶಿವ ದೇವಾಲಯದ ವಿಶೇಷತೆಗಳಾಗಿವೆ. ಇದಲ್ಲದೇ ಪ್ರಾಚೀನ ಸಂಗಮೇಶ್ವರ, ರುದ್ರಗಂಟಿ, ರಾಮಲಿಂಗ, ಸಿದ್ಧರಾಮ ಮತ್ತು ಅಶ್ವತ್ಥನಾರಾಯಣರ ದೇವಾಲಯಗಳು ಐತಿಹ್ಯವನ್ನು ಸಾರುತ್ತಿವೆ.

# ಮನಗೂಳಿ

**ದೂರ:**

ಜಿಲ್ಲಾ ಕೇಂದ್ರದಿಂದ-೨೦ ಕಿ.ಮೀ.

ತಾಲೂಕ ಕೇಂದ್ರದಿಂದ-೨೦ ಕಿ.ಮೀ.



ಮನಗೂಳಿಯು ವಿಜಾಪುರದಿಂದ ಪೂರ್ವಕ್ಕೆ ೨೫ ಕಿ.ಮೀ. ದೂರದಲ್ಲಿದೆ. ಮನಗೂಳಿಯು ಶಾಸನಗಳ ಪ್ರಕಾರ ಮಾಣಿಕ್ಯವಳ್ಳಿ ಮನಿಂಗವಳ್ಳಿ ಎಂದು ಪ್ರಸಿದ್ಧವಾಗಿತ್ತು. ಮನಗೂಳಿಯು ಬಾಗೇವಾಡಿ ಅಗ್ರಹಾರದ ಆಡಳಿತಕ್ಕೆ ಒಳಪಟ್ಟ ಗ್ರಾಮವಾಗಿತ್ತು ಇಲ್ಲಿನ ರಾಮೇಶ್ವರ ದೇವಾಲಯವು ಕಲ್ಯಾಣದ ಚಾಳುಕ್ಯರ ಕಾಲದ ರಚನೆಯಾಗಿದೆ.

ಇದಲ್ಲದೇ ಮನಗೂಳಿಯಲ್ಲಿ ಹನುಮಂತ, ಸೋಮೇಶ್ವರ ದೇವಾಲಯಗಳು ಹಾಗೂ ವಿಠೋಬ, ರಾಘವೇಂದ್ರ ಸ್ವಾಮಿಗಳ ಮಠವು ಸುಪ್ರಸಿದ್ಧವಾಗಿವೆ.

# ಹೂವಿನ ಹಿಪ್ಪರಗಿ

**ದೂರ:**

ಜಿಲ್ಲಾ ಕೇಂದ್ರದಿಂದ-೬೦ ಕಿ.ಮೀ.

ತಾಲೂಕ ಕೇಂದ್ರದಿಂದ-೧೫ ಕಿ.ಮೀ.

ಹೂವಿನ ಹಿಪ್ಪರಗಿಯು ಜಿಲ್ಲಾ ಕೇಂದ್ರದಿಂದ ೫೪ ಕಿ.ಮೀ. ದೂರದಲ್ಲಿದೆ. ಹಿಂದೆ ಇದು ರಾಷ್ಟ್ರಕೂಟರ ಕಾಲದ ಅಗ್ರಹಾರವಾಗಿತ್ತು. ರಾಷ್ಟ್ರಕೂಟರ ಅಮೋಘವರ್ಷನ ಕ್ರಿ.ಶ. ೮೬೨ರ ಶಾಸನದಲ್ಲಿ ಈ ಊರಿನ ಉಲ್ಲೇಖವಿದೆ.

ಊರಿನ ಅಗಸಿಯ ಹತ್ತಿರವಿರುವ ಕಲ್ಮೇಶ್ವರ ದೇವಾಲಯವು ಎತ್ತರವಾದ ಅಧಿಷ್ಠಾನ ಹೊಂದಿದ್ದು, ಗರ್ಭಗೃಹ, ನವರಂಗ ಹಾಗೂ ವೃತ್ತಾಕಾರದ ಕಿರುಸ್ತಂಭಗಳಿರುವ ಕಿರಿದಾದ ಮುಖಮಂಟಪಗಳಿವೆ. ಸುಂದರ ವೈಷ್ಣವ ದ್ವಾರಪಾಲಕರಿರುವ ಬಾಗಿಲುವಾಡದಲ್ಲಿ ಗಜಲಕ್ಷ್ಮೀ ಲಲಾಟ ಬಿಂಬವಿದೆ.

# ಲಾಲ್ ಬಹಾದ್ದೂರ ಶಾಸ್ತ್ರೀ ಸಾಗರ, ಆಲಮಟ್ಟಿ

**ದೂರ:**


ಜಿಲ್ಲಾ ಕೇಂದ್ರದಿಂದ-೬೦ ಕಿ.ಮೀ.

ತಾಲೂಕ ಕೇಂದ್ರದಿಂದ-೩೩ ಕಿ.ಮೀ.



ಆಲಮಟ್ಟಿಯು ಜಿಲ್ಲಾ ಕೇಂದ್ರ ವಿಜಾಪುರದಿಂದ ದಕ್ಷಿಣಕ್ಕೆ ರಾಷ್ಟ್ರೀಯ ಹೆದ್ದಾರಿ ೧೩ರಲ್ಲಿ ೬೦ ಕಿ.ಮೀ. ದೂರದಲ್ಲಿದೆ. ನೈಸರ್ಗಿಕವಾಗಿ ಎರಡು ಗುಡ್ಡಗಳ ನಡುವೆ ಹಾಯ್ದು ಹೋಗುವ ಕೃಷ್ಣಾ ನದಿಗೆ ಅಡ್ಡಲಾಗಿ ಕಟ್ಟಲಾಗಿರುವ ಆಣೆಕಟ್ಟು ನೋಡುಗರ ಮನ ಸೆಳೆಯುತ್ತಿದ್ದು, ವಿವಿಧೋದ್ದೇಶ ಯೋಜನೆಗಳಿಗೆ ಸಹಕಾರಿಯಾಗಿದೆ. ಕೃಷ್ಣಾ ಕೊಳ್ಳದ ನೀರಾವರಿ ಯೋಜನೆಗಳಿಂದ ವಿಜಾಪುರ, ಬಾಗಲಕೋಟೆ ಹಾಗೂ ಗುಲಬರ್ಗಾ ಜಿಲ್ಲೆಗಳಿಗೆ ನೀರಾವರಿ ಸೌಲಭ್ಯ ಸಿಗಲಿದೆ.

## ಉದ್ಯಾನವನದ ನೋಟಗಳು



ಉದ್ಯಾನವನದ ಪ್ರವೇಶ ದ್ವಾರ








ಆಲಮಟ್ಟಿಯಲ್ಲಿರುವ ಕೃಷ್ಣಾ ಗಾರ್ಡನ್, ರಾಕ್ ಗಾರ್ಡನ್, ಇಟಾಲಿಯನ್ ಗಾರ್ಡನ್, ಮುಂತಾದ ಸುಂದರವಾದ ಮನಾಕರ್ಷಕ, ನಯನಮನೋಹರ ಉದ್ಯಾನವನಗಳು ಆಲಮಟ್ಟಿಯನ್ನು ಪ್ರೇಕ್ಷಣೀಯ ಸ್ಥಳವನ್ನಾಗಿಸಿವೆ. ಉದ್ಯಾನವನದಲ್ಲಿರುವ ಮೂರ್ತಿಶಿಲ್ಪಿಗಳು, ಪ್ರಾಣಿಗಳ ಮಾದರಿಗಳು, ಕೊಳಗಳು, ಗ್ರಾಮೀಣ ಬದುಕಿನ ಸತ್ವವನ್ನು ಸಾದರ ಪಡಿಸುತ್ತವೆ.

# ಇಂಡಿ ತಾಲೂಕು

## ಸಾಲೋಟಗಿ

**ದೂರ**

ಜಿಲ್ಲಾ ಕೇಂದ್ರದಿಂದ : ೬೦ ಕಿ. ಮೀ.

ತಾಲೂಕಾ ಕೇಂದ್ರದಿಂದ : ೧೦ ಕಿ. ಮೀ.



ಶ್ರೀ ಶಿವಯೋಗೀಶ್ವರ ದೇವಾಲಯ

ಇಂಡಿಯಿಂದ ಆಗ್ನೇಯಕ್ಕೆ ೮ ಕಿ.ಮೀ ದೂರದಲ್ಲಿರುವ 'ಸಾಲೋಟಗಿ,' ರಾಷ್ಟ್ರಕೂಟ ೩ನೆಯ ಕೃಷ್ಣನ ಕಾಲಕ್ಕೆ ಪ್ರಸಿದ್ಧ ಅಗ್ರಹಾರವಾಗಿತ್ತು. ಪ್ರಾಚೀನ ವಿದ್ಯಾಕೇಂದ್ರಗಳಲ್ಲಿ ತುಂಬಾ ಪ್ರಸಿದ್ದವಾದ ಪಾವಿಟ್ಟಿಗೆಯಲ್ಲಿ ೩ನೆಯ ಕೃಷ್ಣನ ಪ್ರಧಾನಿ, ಸಂಧಿವಿಗ್ರಹಿಯಾಗಿದ್ದ ನಾರಾಯಣನು ಒಂದು ಶಾಲೆಯನ್ನು ಕಟ್ಟಿಸಿ ತ್ರೈಪುರುಷದೇವರನ್ನು ಪ್ರತಿಷ್ಠಾಪಿಸಿದ. ಇಲ್ಲಿನ ಶಾಲೆಗೆ ದೇಶದ ನಾನಾ ಭಾಗಗಳಿಂದ ವಿದ್ಯಾರ್ಥಿಗಳು ಬರುತ್ತಿದ್ದರು. ಊರಿನ ಯಾವದೇ ಸಮಾರಂಭದಲ್ಲಿ ಈ ಶಾಲೆಗೆ ದಾನ ನೀಡುತ್ತಿದ್ದರು. ಇಲ್ಲಿ ವಿದ್ಯಾರ್ಥಿಗಳ ವಸತಿಗಾಗಿ ೨೭ ಕೊಠಡಿಗಳಿದ್ದವು. ದೀಪದ ವ್ಯವಸ್ಥೆಗೆ ೧೨ ನಿವರ್ತನಭೂಮಿ, ವಿದ್ಯಾರ್ಥಿಗಳಿಗಾಗಿ ೫೦೦ ನಿವರ್ತನ ಭೂಮಿ, ಉಪಾಧ್ಯಾಯರುಗಳಿಗೆ ೫೦ ನಿವರ್ತನಭೂಮಿ ಮತ್ತು ಮನೆಯನ್ನು ಕೊಡಲಾಗಿತ್ತು. ಮುಂದಿನ ಶತಮಾನದ ನಂತರದಲ್ಲಿ ಈ ಶಾಲೆ ಕುಸಿದುಬಿದ್ದಾಗ ಶಿಲಾಹಾರ ಕಂಚಿಗನು ಎತ್ತಿ ನಿಲ್ಲಿಸಿದ ಹಾಗೂ ಅನೇಕ ಅರಸರು ವಿವಿಧ ದಾನ-ದತ್ತಿ ನೀಡಿದ ಉಲ್ಲೇಖಗಳು ದೊರೆಯುತ್ತವೆ. ಶಾಲೆಯಿಂದಾಗಿ 'ಸಾವಿಟ್ಟಿಗೆ' ಎಂಬ ಗ್ರಾಮ 'ಶಾಲಾಪಾವಿಟ್ಟಗೆ'ಯಾಗಿ ಅನಂತರದ ದಿನಗಳಲ್ಲಿ ಸಾಲೋಟಗಿ ಎಂದಾಯಿತು ಪೂರ್ಣಪ್ರಮಾಣದಲ್ಲಿ ಈ ಶಾಲೆ ಇಂದು ಕಾಣಬಾರದಿದ್ದರೂ ಕುಲಕರ್ಣಿಯವರ ತೋಟದಲ್ಲಿರುವ ಪುಷ್ಕರಣಿ ಹಾಗೂ ಶಿವಯೋಗೇಶ್ವರ ದೇವಾಲಯದಲ್ಲಿನ ಅವಶೇಷಗಳಿಂದ ಗುರುತಿಸಬಹುದಾಗಿದೆ.

ಹದಿನಾರನೆಯ ಶತಮಾನದಲ್ಲಿ ಜೀವಂತ ವ್ಯಕ್ತಿಯಾಗಿದ್ದು, ಇಂದು ದೈವವಾಗಿ ಪೂಜೆಗೊಳ್ಳುತ್ತಿರುವ ಶ್ರೀಶಿವಯೋಗೇಶ್ವರರು ಗುಲ್ಬರ್ಗಾ ಜಿಲ್ಲೆಯ 'ಸನ್ನತಿ'ಯ ಚೆನ್ನಸೋಮ ಮತ್ತು ಹೊನ್ನಮ್ಮರ ಮಗನಾಗಿ ಭುವಿಗವತರಿಸಿದರು. ಅಂದು ಹಿಂದು-ಮುಸ್ಲಿಂ ರೆಲ್ಲರಿಗೂ ಬೇಕಾದವರಾಗಿ ವಿಜಾಪುರದ ಬಾದಶಹರಿಂದ ಕಾಣಿಕೆಗಳನ್ನು ಸ್ವೀಕರಿಸಿದ್ದಾರೆ. ಇವರನ್ನು ಕುರಿತು ಜೇರುಟಗಿ 'ಸಿದ್ಧಲಿಂಗ' ಕವಿಯು ಶ್ರೀಶಿವಯೋಗಿಶ್ವರ ಪುರಾಣವನ್ನು ಬರೆದಿದ್ದಾರೆ. ಶ್ರೀಶಿವನೇ ಶಿವಯೋಗಿಯಾಗಿ ಬಂದು ಸಾಲೋಟಗಿಯ ದುರುಳ ದೇವತೆಯ ಗರ್ವಭಂಗ ಮಾಡಿ ಹಲವು ಪವಾಡಗೈದು ಕಲ್ಲುನಂದಿಯನ್ನೇರಿ ಕೈಲಾಸಕ್ಕೆ ಹೋದ ಕಥೆಯನ್ನು ಈ ಪುರಾಣ ಒಳಗೊಂಡಿದೆ ಹಾಗೆಯೇ ಗಂಗಾಧರ

ವೆಂಬ ಕವಿಯು ಬರೆದಿದ್ದಾನೆಂದು ಹೇಳಲ್ಪಡುವ 'ಡಂಗುರ' ಪದಗಳನ್ನು ಸ್ವತಃ ಶ್ರೀಶಿವಯೋಗಿಶ್ವರರೇ ಬರೆದಿದ್ದಾರೆಂದು ಸಂಶೋದಕರು ಅಭಿಪ್ರಾಯ ಪಡುತ್ತಾರೆ. ಇದರಲ್ಲಿ ಕಾಲಜ್ಞಾನ ವಚನಗಳಿವೆ. ಶ್ರೀಶಿವಯೋಗೀಶ್ವರರ ದೇವಸ್ಥಾನ ಹಾಗೂ ಮುಂದಿರುವ ಬಾವಿಗಳ ಕಟ್ಟಡಗಳು ನೋಡುವಂತಿವೆ.

## ಲಚ್ಯಾಣ

**ದೂರ:**

ತಾಲೂಕ ಕೇಂದ್ರದಿಂದ - ೧೨ ಕಿ. ಮೀ.

ಜಿಲ್ಲಾ ಕೇಂದ್ರದಿಂದ - ೬೨ ಕಿ. ಮೀ.



ಶ್ರೀ ಸದ್ಗುರು ಸಿದ್ಧಲಿಂಗ ಮಹಾರಾಜರ ಕಮರಿಮಠ ಲಚ್ಯಾಣ

ಮನುಕುಲದ ಅಭ್ಯುದಯಕ್ಕಾಗಿ ಮಹಾ ಪುರುಷರು ಜನ್ಮವೆತ್ತಿ ಬರುತ್ತಾರೆ. ಅಂತಹ ಮಾಹಾತ್ಮರೂ, ಪವಾಡ ಪುರುಷರೂ ಆದ ಲಚ್ಯಾಣದ ಸಿದ್ಧಲಿಂಗ ಮಹಾರಾಜರು ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ವಿಜಾಪುರ ಜಿಲ್ಲೆಯ ಸಿಂದಗಿ ತಾಲೂಕಿನ ಕಕ್ಕಳಮೇಲಿ ಎಂಬ ಗ್ರಾಮದಲ್ಲಿ ಲಚ್ಚಪ್ಪ ಮತ್ತು ನಾಗಮ್ಮ ದಂಪತಿಗಳ ಮಗನಾಗಿ ಅವತರಿಸಿ 'ಸಿದ್ಧಲಿಂಗ' ನಾಮದಿಂದ ಬೆಳಗಿದರು.

ಶ್ರೀ ಸಿದ್ಧಲಿಂಗ ಮಹಾರಾಜರು ಅನೇಕ ಪವಾಡಗಳನ್ನು ಮಾಡಿರುವ ಬಗ್ಗೆ ದಂತಕಥೆಗಳಿವೆ. ಅವುಗಳಲ್ಲಿ ಲಚ್ಯಾಣ ರೈಲು ನಿಲ್ದಾಣದಲ್ಲಿ ರೈಲನ್ನು ತಡೆದು ನಿಲ್ಲಿಸಿ, ಅದು ಮುಂದೆ ಚಲಿಸದಂತೆ ಮಾಡಿರುವದು.

ಬಂಥನಾಳದ ಶ್ರೀಗುರು ಶಂಕರಲಿಂಗ ಗುರುಗಳ ಸೇವೆಗೈದು ಅಂತರಂಗ - ಬಹಿರಂಗ ಶುದ್ಧವಾಗಿ ಪರಿಪಕ್ವಗೊಂಡು ಗುರುವಿನ ಸೂಚನೆಯಂತೆ ಸನ್ಯಾಸ ಧರ್ಮ ಸ್ವೀಕರಿಸಿ ದೇಶ ಸಂಚಾರಗೈದು, ಹೋದಲ್ಲೆಲ್ಲಾ ಭಜನೆ, ಧ್ಯಾನ, ಗುರುಸ್ಮರಣೆ, ಭಿಕ್ಷಾಟನೆ, ಅನ್ನ ಸಂತರ್ಪಣೆ ನಡೆಯುತ್ತಿತ್ತು. ನಿತ್ಯಕಾಯಕಯೋಗಿ ಸಿದ್ಧಲಿಂಗ ಸಾಧುರವರನ್ನು ಜನಸಮೂಹ ಆದರಿಸಿ, ಗೌರವಿಸಿ ನಮಿಸಿದರು. ಸೊಲ್ಲಾಪುರದಿಂದ ಕರ್ನಾಟಕದತ್ತ ಸಾಗಿ ಬಂದ ಸಿದ್ಧಲಿಂಗರು ಭೀಮೆಯಲ್ಲಿ ಮಿಂದು ಸಮೀಪದ ಲಚ್ಯಾಣ ಗ್ರಾಮದ ಗೌಡರಿಗಾಗಿ ಮೀಸಲಿರಿಸಿದ್ದ ರುದ್ರಭೂಮಿಯಲ್ಲಿ ಠಿಕಾಣಿ ಹೂಡಿದರು. ಆ ರುದ್ರಭೂಮಿ ಸಿದ್ಧಿಪುರುಷ ಸಿದ್ಧಲಿಂಗರ ಪಾದಸ್ಪರ್ಶದಿಂದ ಪುನೀತವಾಯಿತು.

ಸಿದ್ಧಲಿಂಗರನ್ನು ನೋಡಿ ಜನಸಮುದಾಯ ಭಕ್ತಿಯಿಂದ ತಲೆಬಾಗಿದರು. ಅವರ ದರುಶನದಿಂದ ಪುಲಕಿತರಾದರು. ಅಲ್ಲಿ ಸಿದ್ಧಲಿಂಗರ ವಾಸಕ್ಕೆ 'ಕೊಂಪೆ' ನಿರ್ಮಾಣವಾಯಿತು. ರಣಗುಡುತ್ತಿದ್ದ ರುದ್ರಭೂಮಿಯಲ್ಲಿ ಆಧ್ಯಾತ್ಮದ ಜ್ಯೋತಿ ಬೆಳಗಿತು.

ಸ್ವತಃ ಸಿದ್ಧಲಿಂಗರು ಸದ್ಗುರು ಶಂಕರಲಿಂಗರ ವಿಶಾಲವಾದ ಮಂಟಪದ ಕೆಳಗಿನ ಗವಿಯಲ್ಲಿ ತಮ್ಮ ಸಮಾಧಿಯನ್ನು ಸಜ್ಜುಗೊಳಿಸಿಕೊಂಡರು. ೧೮ ನೆಯ ಸಪ್ಟಂಬರ ೧೯೨೭ ರಂದು ಧ್ಯಾನಾಸಕ್ತ ಸ್ಥಿತಿಯಲ್ಲಿ ಬೆಳಗಿನ ಜಾವ ದೇಹತ್ಯಾಗ ಮಾಡಿ ಲಿಂಗದಲ್ಲಿ ಲೀನವಾದರು.

ಸಿದ್ಧಲಿಂಗ ಮಹಾರಾಜರ ಸೂಚನೆ ಪ್ರಕಾರ ಲಚ್ಯಾಣ ಸುಕ್ಷೇತ್ರದಲ್ಲಿ

೧. ಸರ್ವಧರ್ಮ ಸಮ್ಮೇಳನ

೨. ಒಂದು ಲಕ್ಷ ತೊಂಭತ್ತಾರು ಸಾವಿರ ಗಣಂಗಗಳ ಸಾಮೂಹಿಕ ಇಷ್ಟಲಿಂಗ ಪೂಜಾ ಮಹೋತ್ಸವ

೩. ಉಚಿತ ಪ್ರಸಾದ ನಿಲಯ

೪. ಶಿಕ್ಷಕರ ತರಬೇತಿ ಕಾಲೇಜು- ಇವೆಲ್ಲ ಪ್ರಗತಿಯ ಸಂಕೇತಗಳಾದವು

## ಹಲಸಂಗಿ ಮಧುರ ಚೆನ್ನರು

**ದೂರ:**

ತಾಲೂಕ ಕೇಂದ್ರದಿಂದ - ೧೨ ಕಿ. ಮೀ.

ಜಿಲ್ಲಾ ಕೇಂದ್ರದಿಂದ - ೫೮ ಕಿ. ಮೀ.



ಇಂಡಿಯಿಂದ ಪಶ್ಚಿಮಕ್ಕೆ ೨೦ ಕಿ.ಮೀ. ದೂರವಿರುವ ಹಲಸಂಗಿಯನ್ನು 'ಕನ್ನಡ ನುಡಿ' ನವೋದಯಕ್ಕೆ ಕಾರಣವಾದ ಕೆಲವೇ ಕೇಂದ್ರಗಳಲ್ಲಿ ಒಂದೆಂದು ಭಾವಿಸಲಾಗುತ್ತಿದೆ. ಇಲ್ಲಿ ದಿನಾಂಕ ೩೧-೦೭-೧೯೦೩ ರಂದು ತಂದೆ ಸಿದ್ಧಲಿಂಗಪ್ಪ, ತಾಯಿ ಅಂಬವ್ವನವರ ಉದರದಲ್ಲಿ ಜನಿಸಿದ ಚನ್ನಮಲ್ಲಪ್ಪ ಸಿದ್ಧಲಿಂಗಪ್ಪ ಗಲಗಲಿಯವರು; ಗೆಳೆಯ ಮಾದಣ್ಣನ ಮಧುರತೆಯೊಂದಿಗೆ ಬೆರೆತು ತಮ್ಮನ್ನು ಮಧುರಚೆನ್ನರೆಂದು ಕರೆದುಕೊಂಡರು.

೧೯೨೨ ರಲ್ಲಿಯೇ ಹಲಸಂಗಿ ಗೆಳೆಯರ ಗುಂಪನ್ನು (ಪಿ. ದುಲಾಸಾಹೇಬ, ಕಾಪಸೆ ರೇವಪ್ಪ, ಸಿಂಪಿ ಲಿಂಗಣ್ಣ ಹಾಗೂ ಓಲೆಕಾರ ಮಾದಣ್ಣ) ಕಟ್ಟಿಕೊಂಡು ಧಾರವಾಡದ ಗೆಳೆಯರ ಗುಂಪಿನೊಂದಿಗೆ ಸಂಪರ್ಕ ಪಡೆದು ಅವರೊಂದಿಗೆ ಅನನ್ಯವಾಗಿ ಬೆರೆತುಕೊಂಡರು. ಶಾರದಾ

ವಾಚನಾಲಯ ಸ್ಥಾಪಿಸಿ ತಾವೂ ಸಾಹಿತ್ಯ ರಚಿಸುವುದಲದೇ ಗೆಳೆಯರನ್ನು ಬೆಳೆಯಿಸಿದರು. 'ನನ್ನ ನಲ್ಲ'ದ ಮೂಲಕ ಅನುಭಾವ ಕವಿಯಾದ ಅವರು 'ಪೂರ್ವರಂಗ', 'ಕಾಳರಾತ್ರಿ', 'ಬೆಳಗು' ಎಂಬ ಗದ್ಯ ಕೃತಿಗಳ ಮೂಲಕ ಆ ಕಾಲಕ್ಕೆ ವಿಶಿಷ್ಟ ತಂತ್ರವನ್ನು ಬಳಸಿದ್ದರು. ಮುಲ್ಕಿ ಪರೀಕ್ಷೆಯವರೆಗೆ ಓದಿದ ಮಧುರ ಚೆನ್ನರು ಸುಮಾರು ೨೨ ಭಾಷೆಗಳನ್ನು ಬಲ್ಲವರಾಗಿದ್ದರೆಂಬುದು ಸೋಜಿಗ. ಜಾನಪದ ಸಾಹಿತ್ಯ, ಶಾಸನ ಸಾಹಿತ್ಯ ಇತ್ಯಾದಿಗಳಿಗೂ ಪ್ರಾಮುಖ್ಯತೆ ನೀಡಿದ್ದರು.

ಶ್ರೀಅರವಿಂದರ ಕಡೆಗೆ ವಾಲಿದ ಮಧುರ ಚೆನ್ನರ ಹಲಸಂಗಿ ಗೆಳೆಯರ ಗುಂಪು ೧೯೪೩ ರಲ್ಲಿ ಅರವಿಂದ ಮಂಡಲವಾಗಿ ರೂಪುಗೊಂಡಿತು. ಈ ಮೊದಲ ೧೫ ನೆಯ ಅಗಷ್ಟ ೧೯೩೮ ರಲ್ಲಿ ಶ್ರೀಅರವಿಂದರ ಪ್ರಥಮ ದರ್ಶನ ಪಡೆದ ಮಧುರ ಚೆನ್ನರು ೧೫ನೆಯ ಅಗಷ್ಟ ೧೯೫೩ ರಂದು ತಾವು ಹುಟ್ಟಿದ ಶ್ರಾವಣದ ಸಿರಿಯಾಳ ಷಷ್ಠಿಯ ದಿನದಂದೇ ಲಿಂಗೈಕ್ಯರಾದರು. ಮುಂದೆ ೧೫ ನೆಯ ಜುಲೈ ೧೯೮೨ ರಲ್ಲಿ ಹಲಸಂಗಿಯಲ್ಲಿ ಶ್ರೀಅರವಿಂದರ ಸ್ಮಾರಕ ಭವನದ ಸ್ಥಾಪನೆಯೂ ಆಗಿದೆ.

ಹಲಸಂಗಿಯಲ್ಲಿ ಇಂದು ಮಧುರಚೆನ್ನರ ಸ್ವಂತ ತೋಟದಲ್ಲಿ ಅವರ ಸಮಾಧಿ ಮತ್ತು ಮಹರ್ಷಿ ಶ್ರೀಅರವಿಂದರ ಸ್ಮಾರಕ ಭವನ ಕಾಣಬಹುದಾಗಿದೆ. ಸಾಹಿತ್ಯ, ಆಧ್ಯಾತ್ಮ ಹಾಗೂ ಸಂಸ್ಕೃತಿಗಳ ತ್ರಿವೇಣಿ ಸಂಗಮವನ್ನಿಲ್ಲಿ ಕಾಣಬಹುದಾಗಿದೆ.

**ಸೂಚನೆ :** ಮಧುರ ಚೆನ್ನರ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಹಲಸಂಗಿಯಲ್ಲಿ ವಾಸವಾಗಿರುವ ಅವರ ಮಗನಾದ ಪುರುಷೋತ್ತಮ ಗಲಗಲಿಯವರೊಂದಿಗೆ ಸಂವಾದ ಮಾಡಬಹುದು.

## ನಿಂಬಾಳ

**ದೂರ:**

ತಾಲೂಕ ಕೇಂದ್ರದಿಂದ - ೧೨ ಕಿ. ಮೀ.

ಜಿಲ್ಲಾ ಕೇಂದ್ರದಿಂದ - ೫೦ ಕಿ. ಮೀ.



ಕಲ್ಯಾಣಿ ಚಾಲುಕ್ಯರ ಕಾಲದಿಂದಲೂ ಶಿಲ್ಪಕಲೆ, ದಾನ-ಧರ್ಮಕ್ಕೆ ಪ್ರಸಿದ್ಧವಾಗಿದ್ದು, ನಿಂಬಾಳ ಆಧುನಿಕ ಕಾಲದಲ್ಲಿ ಗುರುದೇವ ಆರ್. ಡಿ. ರಾನಡೆಯವರ ಆಧಾತ್ಮಿಕ ಕೇಂದ್ರದಿಂದ ರಾರಾಜಿಸುತ್ತಿದೆ.

ಇಂಡಿಯಿಂದ ೨೨ ಕಿ.ಮೀ. ದೂರದಲ್ಲಿರುವ ಇದು 'ನಿಂಬರ' ಎಂಬ ಜನಾಂಗದಿಂದಾಗಿ ನಿಂಬರಪುರ >ನಿಂಬಹಳ್ಳಿ> ನಿಂಬಾಳ ಎಂದು ಹೆಸರನ್ನು ಪಡೆಯಿತು. ತರ್ದವಾಡಿ ನಾಡಿನ ಅಂಕಲಿಗೆ ಐವತ್ತೂರಲ್ಲಿದ್ದ ಈ ಗ್ರಾಮದಲ್ಲಿ ಈಗ ಉಳಿದಿರುವ ಕೆಲವೇ ಸ್ಮಾರಕಗಳಲ್ಲಿ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಕಟ್ಟಲ್ಪಟ್ಟ ಶಂಕರಲಿಂಗ ಅಥವಾ ಕೋಟಿ ಶಂಕರಲಿಂಗ ದೇವಾಲಯ ಬಹಳ ಮುಖ್ಯವಾದುದು.

ಈ ದೇವಸ್ಥಾನ ಸದ್ಯ ಕೇಂದ್ರ ಪುರಾತತ್ವ ಇಲಾಖೆಯ ಸಂರಕ್ಷಣೆಗೆ ಒಳಪಟ್ಟಿದ್ದು ಇದೇ ಇಲಾಖೆಯಿಂದ ಜೀರ್ಣೋದ್ಧಾರಗೊಂಡಿದೆ. ಈ ದೇವಾಲಯದ ಆವರಣದಲ್ಲಿ ನೂರಾರು ಲಿಂಗಗಳು, ಎತ್ತರವಾದ ಬಾಣಲಿಂಗ ಹೊಂದಿದ ಪಾಣಿಪೀಠಗಳು ಇಲ್ಲಿವೆ. ಇವುಗಳಲ್ಲಿ ಕೆಲವನ್ನು ಬೇರೆಕಡೆಗೆ ಸ್ಥಳಾಂತರಿಸಲಾಗಿದೆ ಎಂದು ತಿಳಿದುಬರುತ್ತದೆ.

ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಪೂರ್ವಭಿಮುಖವಾಗಿ ಕಟ್ಟಲ್ಪಟ್ಟಿದ್ದು; ಗರ್ಭಗೃಹ, ಅರ್ಧಮಂಟಪ, ನವರಂಗ, ಮುಖ ಮಂಟಪವನ್ನು ಒಳಗೊಂಡಿದೆ. ದೇವಾಲಯದಲ್ಲಿರುವ ಗರ್ಭಗೃಹದಲ್ಲಿರುವ ಪಾಣಿಪೀಠದ ಕೆಳಗೆ ಆಳವಾದ 'ಗವಿ' ಇರುವುದೆಂದು ಅಲ್ಲಿಯೇ ಒಂದು ಗುಪ್ತಮಾರ್ಗವಿದ್ದು ಅದು ಅಲ್ಲಿಂದ ದೇಸಾಯಿಯವರ ಮನೆಯವರೆಗೆ ಇದೆಯೆಂದು, ದೇಸಾಯಿಯವರ ಮನೆಯಿಂದ ಇನ್ನೊಂದು ಗುಪ್ತಮಾರ್ಗ ಊರ ಹೊರಗೆ ಹೋಗುವದು. ಆದರೆ ಇವರಡೂ ಮಾರ್ಗಗಳು ಈಗ ಮುಚ್ಚಿವೆಯೆಂದು ಸ್ಥಳೀಕರು ಹೇಳುತ್ತಾರೆ.

## ಆರ್. ಡಿ. ರಾನಡೆ



ನಿಂಬಾಳದ ಹೆಸರನ್ನು ಭಾರತದುದ್ದಕ್ಕೂ ಹಾಗೂ ಭಾರತದ ಹೊರಗೂ ಪಸರಿಸಿದವರು ಗುರುದೇವ ರಾಮಚಂದ್ರ ದತ್ತಾತ್ರೇಯ ರಾನಡೆಯವರು.

ದಿನಾಂಕ : ೦೩-೦೭-೧೮೮೬ ರಲ್ಲಿ ಜನಿಸಿದ ರಾನಡೆಯವರು ನಿಂಬಾಳದಲ್ಲಿ ಬಾಹು ಮಹಾರಾಜರ ಚಿತಾಭಸ್ಮವನ್ನಿರಿಸಿ ಆಶ್ರಮವನ್ನು ಸ್ಥಾಪಿಸಿದರು. ಪ್ರತಿವರ್ಷ ನಿಂಬರಗಿ, ಉಮದಿ, ಇಂಚಗೇರಿಗಳಿಗೆ ಹೋಗಿ ದರ್ಶನ ಪಡೆದು ಬರುತ್ತಿದ್ದರು. ರಾನಡೆಯವರು ಅನೇಕ ಕೃತಿಗಳನ್ನು ರಚಿಸಿದರು. ಇದರಲ್ಲಿ ಉಪನಿಷದ್ರಹಷ್ಯ ಬಹುಮುಖ್ಯವಾದದ್ದು. ಹಾಗೆಯೇ ನಿತ್ಯಸೀಮಾವಲಿ, ಬೋಧಸುದೆ, ಮಹಾರಾಷ್ಟ್ರ ಸಂತರ ಅನುಭಾವ, ಹಿಂದು ಸಂತರ ಪಾರಮಾರ್ಥ ಪಥ, ಭಗವದ್ಗೀತೆಯ ಸಾಕ್ಷಾತ್ಕಾರ  ದರ್ಶನ, ಧ್ಯಾನಗೀತೆ, ಕನ್ನಡ ಸಂತರಥಾ ಪಾರಮಾರ್ಥ ಪಥ ಇವು ಮುಖ್ಯವಾದವುಗಳು.

ಗುರುದೇವ ರಾನಡೆಯವರು ದಿನಾಂಕ : ೦೬-೦೬-೧೯೮೭ ರಲ್ಲಿ ನಿಂಬಾಳದಲ್ಲಿ ನಿರ್ವಾಣ ಹೊಂದಿದರೂ ಅವರ ದಿವ್ಯ ಚೈತನ್ಯ ಇನ್ನೂ ಮುಮುಷುಗಳಿಗೆ ದಾರಿತೋರುತ್ತಿದೆ. ಅವರ ದೇಶ-ವಿದೇಶಗಳ ಶಿಷ್ಯರು ಈಗಲೂ ನಿಂಬಾಳಕ್ಕೆ ಬಂದು ಕೆಲದಿನವಿದ್ದು ಹೋಗುತ್ತಿದ್ದಾರೆ. ಧ್ಯಾನ, ದೇವರ ನಾಮಸ್ಮರಣೆ, ದಾರ್ಶನಿಕರ ಗ್ರಂಥ ಪಾರಾಯಣ ನಿಂಬಾಳದಲ್ಲಿ ಅವ್ಯಾಹತವಾಗಿ ನಡೆಯುತ್ತಿದೆ.

# ಚಡಚಣ ಡಾ. ಸಿಂಪಿ ಲಿಂಗಣ್ಣ

**ದೂರ:**

ತಾಲೂಕ ಕೇಂದ್ರದಿಂದ - ೪೦ ಕಿ. ಮೀ.

ಜಿಲ್ಲಾ ಕೇಂದ್ರದಿಂದ - ೭೫ ಕಿ. ಮೀ.



ಶ್ರೀ ಸಿಂಪಿ ಲಿಂಗಣ್ಣನವರ ಸ್ಮಾರಕ

ಇಂಡಿಯಿಂದ ಸುಮಾರು ೪೦ ಕಿ. ಮೀ. ದೂರದಲ್ಲಿರುವ ಚಡಚಣ ಗ್ರಾಮದಲ್ಲಿ ಜಾನಪದ ಜಂಗಮ, ವಿಶ್ವಕೋಶವೆನಿಸಿದ ಸಿಂಪಿ ಲಿಂಗಣ್ಣನವರು ೧೦ನೇ ಫೆಬ್ರುವರಿ ೧೯೦೫ ರಲ್ಲಿ ಜನಿಸಿದರು. ಅರವಿಂದವಾಣಿಯನ್ನು ಮೊದಲು ಪ್ರತಿಧ್ವನಿಸಿದ ಹಲಸಂಗಿ ಬಳಗದ ಬಳ್ಳಿಗೆ ಸೇರಿದವರು. ಸೃಜನ ಸಾಹಿತ್ಯ, ಜಾನಪದ ಸಾಹಿತ್ಯ, ಅನುವಾದ ಸಾಹಿತ್ಯ, ಅನುಭಾವ ಸಾಹಿತ್ಯದಲ್ಲಿ ಸಿಂಪಿಯವರ ಪ್ರತಿಭೆ-ಪರಿಶ್ರಮ ಪಾಂಡಿತ್ಯಗಳ ತ್ರಿವೇಣಿಯನ್ನು ಕಾಣಬಹುದು. ಕಥೆ, ಕವನ, ನಾಟಕ, ಪ್ರಬಂಧ, ಜೀವನ

ಚರಿತ್ರೆ, ಮಕ್ಕಳ ಸಾಹಿತ್ಯ ರಚಿಸಿದ್ದಾರೆ. ರಾಮತೀರ್ಥರ ಅರವಿಂದ ಸಾಹಿತ್ಯವನ್ನು ಮರಾಠಿ, ಬಂಗಾಲಿ, ಹಿಂದಿಭಾಷೆಯಿಂದ ಸಮರ್ಥವಾಗಿ ಕನ್ನಡಕ್ಕೆ ತಂದಿದ್ದಾರೆ. ಇವರು ಹಿಂದಿ, ಬಂಗಾಲಿ ಭಾಷೆಗಳಲ್ಲಿ ಪರಿಣಿತಿ ಹೊಂದಿದ್ದರು. ಗರತಿಯಬಾಳು, ಜನಾಂಗದ ಜೀವಾಳ (ಸರಕಾರದಿಂದ ಬಹುಮಾನದ) ವೈಚಾರಿಕ ಕೃತಿಗಳು. ಇವರ 'ಸ್ವರ್ಗದೋಲೆಗಳು' ಜನಪ್ರಿಯ ಗ್ರಂಥವೆನಿಸಿದೆ.

ಮಧುರಚೆನ್ನರ ಸಂಪರ್ಕದಲ್ಲಿ ಸಿಂಪಿಲಿಂಗಣ್ಣನವರು ಆಧ್ಯಾತ್ಮದೆಡೆ ಸೆಳೆತಕ್ಕೊಳಪಟ್ಟವರು. ಇವರು ರಾಷ್ಟ್ರಪ್ರಶಸ್ತಿ ಶಿಕ್ಷಕ ಪ್ರಶಸ್ತಿ, ಜೊತೆಗೆ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನ, ಕೊಪ್ಪಳದಲ್ಲಿ ಜರುಗಿದ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾದದ್ದು ಸ್ಮರಣೀಯವಾಗಿದೆ.

**ಸೂಚನೆ :** ಸಿಂಪಿ ಲಿಂಗಣ್ಣನವರ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಚಡಚಣದ ಸ್ಥಳೀಕರೊಂದಿಗೆ ಸಂವಾದ ಮಾಡಬಹುದು.

# ಉತ್ತಮ ಶಾಲೆ

**ದೂರ:**

ತಾಲೂಕ ಕೇಂದ್ರದಿಂದ - ೪೫ ಕಿ. ಮೀ.

ಜಿಲ್ಲಾ ಕೇಂದ್ರದಿಂದ - ೭೫ ಕಿ. ಮೀ.



ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ರೇವತಗಾಂವ, ಚಡಚಣ ವಲಯ

ಕರ್ನಾಟಕದ ಗಡಿ ಗ್ರಾಮವಾದ ರೇವತಗಾಂವ ವಿಜಾಪೂರ ಜಿಲ್ಲೆಯ ಇಂಡಿ ತಾಲೂಕಿನ ಕೊನೆಯ ಹಳ್ಳಿ ರಾಷ್ಟ್ರೀಯ ಹೆದ್ದಾರಿ ೧೩ ರಲ್ಲಿರುವ ಝುಳಕಿಯಿಂದ ಫಂಡರಪೂರಕ್ಕೆ ಹೋಗುವ ಮಾರ್ಗದಲ್ಲಿ ಸುಮಾರು ૩૫ ಕಿ.ಮೀ ಅಂತರದಲ್ಲಿದೆ.

ಇಲ್ಲಿಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಸ್ವಾತಂತ್ರ್ಯ ಪೂರ್ವ ೧೮೮೩ ರಲ್ಲಿ ಸ್ಥಾಪನೆಯಾಗಿದೆ. ಇದೊಂದು ಜಿಲ್ಲೆಯ ಉತ್ತಮ ಶಾಲೆಯಾಗಿದ್ದು, ಶಾಲೆಗೆ ೬ ಎಕರೆ ಜಮೀನನ್ನು ಗ್ರಾಮದ ದಾನಿಗಳಾದ ಶ್ರೀ ಮಾನೆ ಸಹೋದರರು ನೀಡಿದ್ದಾರೆ. ಇದೇ ಜಮೀನಿನಲ್ಲಿ ಶಾಲಾ ಕೋಣೆಗಳ ನಿರ್ಮಾಣವಾಗಿದೆ ಆಟದ ಮೈದಾನದ ಸುತ್ತಲೂ ೨೦೦ ಬೇವಿನ ಮರಗಳನ್ನು ನೆಟ್ಟು ಪರಿಸರ ರಕ್ಷಣೆಗೆ ಆದ್ಯತೆ ನೀಡಲಾಗಿದೆ. ಇಲ್ಲಿ ಒಟ್ಟು ೧೨ ಜನ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದು, ಒಟ್ಟು ૩೬೨ ಮಕ್ಕಳ ದಾಖಲಾತಿ ಇದ್ದು ಶೇ. ೯೦% ರಷ್ಟು ಹಾಜರಾತಿ ಇದೆ. ಎಸ್.ಡಿ.ಎಮ್.ಸಿ. ಶಾಲೆಯ ಅಭಿವೃದ್ಧಿಗಾಗಿ ಶ್ರಮಿಸುತ್ತಲಿದೆ. ಇಲ್ಲಿ ಮಕ್ಕಳ ಗುಣಾತ್ಮಕ ಕಲಿಕೆಗೆ ಹೆಚ್ಚಿನ ಗಮನ ನೀಡಲಾಗುತ್ತಿದ್ದು ಕೆ.ಎಸ್.ಕ್ಯೂ.ಎ.ಓ. ಫಲಿತಾಂಶದಲ್ಲಿ ಮಕ್ಕಳ ಸಾಧನೆ ಪ್ರಶಂಸನೀಯವಾಗಿದೆ.

ಸರಕಾರದ ಎಲ್ಲಾ ಪ್ರೋತ್ಸಾಹದಾಯಕ ಯೋಜನೆಗಳನ್ನು ಯಶಸ್ವಿಯಾಗಿ ಇಲ್ಲಿ ಜಾರಿಗೊಳಿಸಲಾಗಿದೆ.

# ಮುದ್ದೇಬಿಹಾಳ ತಾಲೂಕು

## ನಾಲತವಾಡ

**ದೂರ:**

ಜಿಲ್ಲಾ ಕೇಂದ್ರದಿಂದ-೧೦೦ ಕಿ.ಮೀ.

ತಾಲೂಕ ಕೇಂದ್ರದಿಂದ-೨೦ ಕಿ.ಮೀ.



ಶ್ರೀ ವೀರೇಶ್ವರರು

೨೦ನೇ ಶತಮಾನದ ಶರಣ ಶ್ರೇಷ್ಠರಾದ ಶ್ರೀ ವೀರೇಶ್ವರರ ಜನ್ಮಭೂಮಿ ನಾಲತವಾಡ. ಇದು ವಿಜಾಪುರದಿಂದ ೧೦೦ ಕಿ.ಮೀ. ಹಾಗೂ ಮುದ್ದೇಬಿಹಾಳದಿಂದ ೨೦ ಕಿ.ಮೀ. ದೂರವಿದೆ. ವೀರೇಶ ಶರಣರು ಶಿಕ್ಷಕರಾಗಿ, ಕೃಷಿಕರಾಗಿ ಜಂಗಮ ದಾಸೋಹದಲ್ಲಿ ನಿರತರಾಗಿದ್ದ ಶರಣರು. ಗ್ರಾಮ ದೇವತೆಯ ಜಾತ್ರೆಯಲ್ಲಿ ಪ್ರಾಣಿ ಬಲಿ ಕೊಡುವುದನ್ನು ವಿರೋಧಿಸಿದರು. ಇವರು ಹುಟ್ಟಿ ಬೆಳೆದದ್ದು ನಾಲತವಾಡವಾದರೂ ಸಾಧನೆ ಮಾಡಿದ ಕ್ಷೇತ್ರ ಸೋಲಾಪುರವು ಆಗಿದೆ. ಇಲ್ಲಿ ಶರಣರು ಹುಟ್ಟಿ ಬೆಳೆದ ಮಹಾಮನೆ ಇರುತ್ತದೆ.

## ಸರೂರ

**ದೂರ:**

ಜಿಲ್ಲಾ ಕೇಂದ್ರದಿಂದ-೮೫ ಕಿ.ಮೀ.

ತಾಲೂಕ ಕೇಂದ್ರದಿಂದ-೦೫ ಕಿ.ಮೀ.



ಶ್ರೀ ರೇವಣ್ಣಸಿದ್ದೇಶ್ವರ ದೇವಸ್ಥಾನ (೭ ಗುಡಿ)



ಶ್ರೀ ರೇವಣ್ಣಸಿದ್ದೇಶ್ವರ ದೇವಸ್ಥಾನ

ವಿಜಾಪುರದಿಂದ ೪೫ ಕಿ.ಮೀ. ಹಾಗೂ ಮುದ್ದೇಬಿಹಾಳದಿಂದ ೫ ಕಿ.ಮೀ. ದೂರದಲ್ಲಿರುವ ಪುಟ್ಟ ಗ್ರಾಮ ಸರೂರ. ಅಲ್ಲಿ ದೊರೆತ ಶಾಸನದ ಪ್ರಕಾರ ೧೨೧೨ರಲ್ಲಿ ನಿರ್ಮಿಸಿದ ಚಾಲುಕ್ಯ ಶೈಲಿಯ ಸಿದ್ಧರಾಮೇಶ್ವರ ದೇವಸ್ಥಾನವಿದೆ. ಇದಕ್ಕೆ ಈಗ ರೇವಣಸಿದ್ಧೇಶ್ವರ ದೇವಾಲಯವೆಂದೂ ಕರೆಯುತ್ತಾರೆ. ಇದರಲ್ಲಿ ಐದು ಗೋಪುರಗಳ ಹಾಗೂ ಎರಡು ಗೋಪುರಗಳ ಎರಡು ದೇವಸ್ಥಾನಗಳಿದ್ದು, ಅವು ಏಳು ಗುಡಿಯೆಂದೂ ಹೆಸರುವಾಸಿಯಾಗಿವೆ. ಇದನ್ನು ಹೊನ್ನಗುಂದದ ಬೀಚಗೌಡನು, ಅರಸನಾಳದ ಮಂಕಿಸಿದ್ಧನಿಂದ ಕಟ್ಟಿಸಿದನು.

## ಯಲಗೂರ

**ದೂರ:**

ತಾಲೂಕಾ ಕೇಂದ್ರದಿಂದ - ೧೫ ಕಿ.ಮೀ.

ಜಿಲ್ಲಾ ಕೇಂದ್ರದಿಂದ-೬೫ ಕಿ.ಮೀ.



ಜಿಲ್ಲಾ ಕೇಂದ್ರದಿಂದ ೬೫ ಕಿ.ಮೀ. ಅಂತರದಲ್ಲಿ ರಾಷ್ಟ್ರೀಯ ಹೆದ್ದಾರಿ ೧೩ರ ಮೇಲೆ ಯಲಗೂರ ಗ್ರಾಮವಿದೆ. ಕೃಷ್ಣಾ ತಟದಲ್ಲಿರುವ ಇಲ್ಲಿ ಪ್ರಸಿದ್ಧ ಆಂಜನೇಯ (ಯಲಗೂರದಪ್ಪ) ದೇವಸ್ಥಾನವಿದೆ. ಈ ದೇವಾಲಯಕ್ಕೆ ೩೫೦ ವರ್ಷಗಳ ಇತಿಹಾಸವಿದೆ. ನಾಡಿನ ಜನ ಇಲ್ಲಿಗೆ ಆಗಮಿಸಿ ದರ್ಶನ ಪಡೆಯುತ್ತಾರೆ

# ತಂಗಡಗಿ

**ದೂರ:**

ಜಿಲ್ಲಾ ಕೇಂದ್ರದಿಂದ-೯೮ ಕಿ.ಮೀ.

ತಾಲೂಕ ಕೇಂದ್ರದಿಂದ-೧೮ ಕಿ.ಮೀ.



ರಕ್ಕಸ ತಂಗಡಗಿ ಸೇತುವೆ ಹಾಗೂ ಶರಣೆ ನೀಲಾಂಬಿಕ, ಹಡಪದ ಅಪ್ಪಣ್ಣನವರ ಸಮಾಧಿಗಳು

ತಂಗಡಗಿಯು ಒಂದು ಐತಿಹಾಸಿಕ ಸ್ಥಳವಾಗಿದೆ. ಮುದ್ದೇಬಿಹಾಳದಿಂದ ೧೮ ಕಿ.ಮೀ. ಅಂತರದಲ್ಲಿ ಕೃಷ್ಣಾ ತಟದಲ್ಲಿದೆ. ಮಹಾತ್ಮ ಬಸವಣ್ಣನವರ ಆಚಾರ ಪತ್ನಿ ನೀಲಾಂಬಿಕೆ ಲಿಂಗೈಕ್ಯ ಹೊಂದಿರುವ ಸ್ಥಳದಲ್ಲಿ ಈ ಸ್ಮಾರಕ ನಿರ್ಮಿಸಲಾಗಿದೆ. ಜೊತೆಗೆ ಮಹಾಶಿವಶರಣ ಹಡಪದ ಅಪ್ಪಣ್ಣನವರ ಸ್ಮಾರಕವೂ ಇಲ್ಲಿದೆ. ಐತಿಹಾಸಿಕ ರಕ್ಕಸ-ತಂಗಡಗಿ ಯುದ್ಧ ನಡೆದ ಸ್ಥಳ ಇದಾಗಿದೆ.

# ಮಿಣಜಗಿ

**ದೂರ:**

ಜಿಲ್ಲಾ ಕೇಂದ್ರದಿಂದ-೭೫ ಕಿ.ಮೀ.

ತಾಲೂಕ ಕೇಂದ್ರದಿಂದ-೨೦ ಕಿ.ಮೀ.

ಮಿಣಜಗಿ ಗ್ರಾಮವು ವಿಜಾಪುರದಿಂದ ಪೂರ್ವಕ್ಕೆ ೭೫ ಕಿ.ಮೀ. ಹಾಗೂ ಮುದ್ದೇಬಿಹಾಳದಿಂದ ಈಶಾನ್ಯಕ್ಕೆ ೨೦ ಕಿ.ಮೀ. ದೂರದಲ್ಲಿದೆ. ಇಲ್ಲಿನ ಭೂ ಗರ್ಭದಲ್ಲಿ ಪದರು ಶಿಲೆಯ ಸಂಪತ್ತಿದೆ. ಈ ಪರಸಿ ಕಲ್ಲುಗಳನ್ನು ಮನೆ, ಮಠ, ಮಂದಿರಗಳಿಗೆ ನೆಲ ಹಾಸಿಗೆ ಮತ್ತು ಕಟ್ಟಡಕ್ಕಾಗಿ ಬಳಸುತ್ತಾರೆ.

# ಸಿಂದಗಿ ತಾಲೂಕು

## ಕಡ್ಲೇವಾಡ

**ದೂರ:**

ಜಿಲ್ಲಾ ಕೇಂದ್ರದಿಂದ-೯೦ ಕಿ.ಮೀ.

ತಾಲೂಕ ಕೇಂದ್ರದಿಂದ-೩೦ ಕಿ.ಮೀ.



ವಿಜಾಪುರದಿಂದ ಪೂರ್ವಕ್ಕೆ ೬೦ ಕಿ.ಮೀ. ಅಂತರದಲ್ಲಿ ತಾಲೂಕಾ ಸ್ಥಳ ಸಿಂದಗಿ ಇರುತ್ತದೆ. ಅಲ್ಲಿಂದ ಉತ್ತರಕ್ಕೆ ೩೦ ಕಿ.ಮೀ. ದೂರದಲ್ಲಿ ಕಡ್ಲೇವಾಡ ಇರುತ್ತದೆ. ಈ ಊರು ದೇವಣಗಾಂವ ಸಮೀಪದಲ್ಲಿ ಭೀಮಾನದಿಯ ದಂಡೆಯ ಮೇಲಿದೆ.

ಕಡ್ಲೇವಾಡದಲ್ಲಿ ಕಲ್ಯಾಣ ಚಾಳುಕ್ಯ ಶೈಲಿಯ ಸೋಮೇಶ್ವರ ದೇವಾಲಯವು ಒಂದು ಸಂಕೀರ್ಣ ಕಟ್ಟಡವಾಗಿದೆ. ಇದಕ್ಕೆ ದಕ್ಷಿಣ ಕಾಶಿ ಎಂದೂ ಇಲ್ಲಿನ ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಸ್ಥಳೀಯವಾಗಿ ಸ್ವಾಮಿಲಿಂಗ ಅಥವ ಸೋಮನಾಥ ದೇವಾಲಯವೆಂದು ಕರೆಯಲಾಗುತ್ತಿದೆ.

ದೇವಾಲಯದ ಗರ್ಭಗೃಹವು ನಕ್ಷತ್ರ ಆಕಾರದ ತಳವಿನ್ಯಾಸ ಹೊಂದಿದೆ. ಮೇಲ್ಭಾಗದಲ್ಲಿದ್ದ ಕದಂಬ ನಾಗರ ಶೈಲಿಯ ಶಿಖರವು ಬಿದ್ದಿದೆ. ಒಳಗೆ ಪ್ರಾಚೀನ ಪಾಣಿಪೀಠದ ಮೇಲೆ ಬಾಣಲಿಂಗವಿದೆ. ದೇವಾಲಯದ ನವರಂಗದ ಮುಂಭಾಗದಲ್ಲಿ ಕಿರು ಅರ್ಧ ಮಂಟಪವಿದ್ದು, ಇದರ ಮುಂದೆ ಎರಡು ವಿಶಾಲವಾದ ಮುಖಮಂಟಪಗಳಿವೆ. ಅಲ್ಲಿರುವ ಸ್ತಂಭಗಳ ಮೇಲೆ ಸೂರ್ಯ, ಕಾಳಭೈರವ, ಶಿವ, ವಿಷ್ಣು, ನಾರಾಯಣ, ಗೋಪಾಲಕೃಷ್ಣ, ಬೇಡರ ಕಣ್ಣಪ್ಪ ಮೊದಲಾದ ದೇವ-ದೇವತೆಗಳ ಸುಂದರ ಉಬ್ಬು ಶಿಲ್ಪಗಳಿವೆ. ಇವು ನೋಡುಗನ ಮನಸ್ಸನ್ನಾಕರ್ಷಿಸುತ್ತವೆ.



ದೇವಾಲಯದ ಗೋಡೆಗಳ ನಕ್ಷತ್ರಾಕಾರವಾಗಿರುವ ಮೂಲೆಗಳಲ್ಲಿ ನಾಟ್ಯಭಂಗಿಯಲ್ಲಿರುವ ಮದನಿಕೆಯರ ವಿಗ್ರಹಗಳನ್ನು ಅತ್ಯಂತ ಆಕರ್ಷಕವಾಗಿ ಕೆತ್ತಲಾಗಿದೆ. ಈ ರೀತಿಯ ವಿಗ್ರಹಗಳು ದೇವಾಲಯದ ಸುತ್ತಲೂ ಕಂಡುಬರುತ್ತವೆ. ತಳಪಾಯದ ಮೇಲೆ ಭಿತ್ತಿಗಳಲ್ಲಿ ಅಂಕಣಗಳಿದ್ದು ಹಂಸಗಳ ಸಾಲು, ಆನೆಗಳ ಸಾಲು ಮತ್ತು ವಿವಿಧ ಅಲಂಕಾರಿಕ ಲತೆ, ಬಳ್ಳಿಗಳ ಅಲಂಕಾರವಿರುವುದು ಕಂಡು ಬರುತ್ತವೆ. ಈ ರೀತಿಯ ಶಿಲ್ಪಕಲೆಯು ಹಂಪಿಯ ಹಜಾರ ರಾಮ ದೇವಸ್ಥಾನದಲ್ಲಿಯೂ ಕಾಣಬಹುದು.

ಸೋಮೇಶ್ವರ ದೇವಾಲಯದ ಹಿಂಭಾಗದಲ್ಲಿ ಅನತಿ ದೂರದಲ್ಲಿ ಇನ್ನೊಂದು ಕಲ್ಯಾಣ ಚಾಳುಕ್ಯರ ಶೈಲಿಯ ತ್ರಿಕೂಟಾಚಲವಿದೆ. ಈ ದೇವಾಲಯವು ಶಿಥಿಲಾವಸ್ಥೆಯಲ್ಲಿದೆ.

# ಸಿಂದಗಿ

ದೂರ: ಜಿಲ್ಲಾ ಕೇಂದ್ರದಿಂದ-೬೦ ಕಿ.ಮೀ.



ಶ್ರೀಸಂಗಮೇಶ್ವರ ದೇವಸ್ಥಾನದ ಹೆಬ್ಬಾಗಿಲು

ಸಿಂದಗಿಯು ತಾಲೂಕಾ ಸ್ಥಳವಾಗಿದೆ. ಇದು ವಿಜಾಪುರದಿಂದ ಪೂರ್ವಕ್ಕೆ ೬೦ ಕಿ.ಮೀ. ದೂರದಲ್ಲಿದೆ. ಸಿಂದಗಿಯನ್ನು ಕ್ರಿ.ಶ. ೧೨೦೦ರಲ್ಲಿ ಸಿಂದು ಬಲ್ಲಾಳ ಎಂಬ ಸಾಮಂತ ಅರಸನು ಕಟ್ಟಿದನೆಂಬ ಪ್ರತೀತಿ ಇದೆ. ಆದ್ದರಿಂದ ಈ ಊರಿಗೆ ಸಿಂದಗಿ ಎಂಬ ಹೆಸರು ಬಂದಿದೆ. ಇಲ್ಲಿರುವ ಸಂಗಮೇಶ್ವರ ದೇವಾಲಯವು ಕಲ್ಯಾಣ ಚಾಲುಕ್ಯರ ಶೈಲಿಯಲ್ಲಿ ನಿರ್ಮಿತವಾಗಿದೆ. ದೇವಾಲಯದ ಗರ್ಭಗೃಹದ ಮೇಲೆ ಕದಂಬ ನಾಗರ ಶೈಲಿಯ ಶಿಖರ ಭಾಗವಿದೆ. ನವರಂಗದಲ್ಲಿ ಕಲ್ಯಾಣ ಚಾಲುಕ್ಯರ ನಾಲ್ಕು ಸ್ತಂಭಗಳಿವೆ. ಗೋಡೆಗಳಲ್ಲಿ ದೇವ ಕೋಷ್ಠಗಳಿರುತ್ತವೆ. ಬಿಡಿ ಲಿಂಗ, ವೇಣುಗೋಪಾಲ, ವಿಷ್ಣು ಅಥವಾ ನಾರಾಯಣ, ಭಕ್ತ ದಂಪತಿಗಳು ಮೊದಲಾದ ಬಿಡಿ ಶಿಲ್ಪಗಳು ಕಂಡುಬರುತ್ತವೆ.

ದೇವಾಲಯದ ಎದುರಿಗೆ ತೆರೆದ ಮಂಟಪದಲ್ಲಿ ಶಿವಲಿಂಗಗಳೂ, ಎರಡು ನಂದಿಗಳು, ಮಹಿಷ ಮರ್ಧಿನಿಯರ ಶಿಲಾಕೃತಿಗಳಿವೆ. ಸುತ್ತಲೂ ವಿಶಾಲವಾದ ಪ್ರಾಂಗಣವಿದೆ. ಪ್ರಾಂಗಣದಲ್ಲಿ ಮೂರು ಜನ ಯತಿಗಳು, ಪಾರ್ವತಿ, ಭೈರವ ಮೊದಲಾದ ವಿಜಯನಗರೋತ್ತರ ಶೈಲಿಯ ಬೃಹತ್ ಶಿಲ್ಪಗಳಿವೆ. ಪ್ರತಿ ವರ್ಷ ಸಂಕ್ರಮಣಕ್ಕೆ ಈ ದೇವಾಲಯದಲ್ಲಿ ಜಾತ್ರೆ ನಡೆಯುತ್ತದೆ.

ದೇವಾಲಯದ ಒಳ ಪ್ರಾಕಾರವು ವಿಶಾಲವಾಗಿದೆ. ಪ್ರದಕ್ಷಿಣಾ ಪಥದ ಬಲಭಾಗದಲ್ಲಿ ಪ್ರತ್ಯೇಕವಾದ ಭ್ರಮರಾಂಬಿಕಾ ದೇವಾಲಯವಿದೆ. ನರಸಿಂಹ ಮತ್ತು ಬನಶಂಕರಿಯ ಚಿಕ್ಕ ಗುಡಿಗಳು ಇರುತ್ತವೆ. ಅನೇಕ ಬಿಡಿ ವಿಗ್ರಹಗಳು ಈ ದೇವಾಲಯದಲ್ಲಿ ಇರುತ್ತವೆ.



ಶ್ರೀಸಂಗಮೇಶ್ವರ ದೇವಸ್ಥಾನದಲ್ಲಿನ ಯತಿಗಳ ಶಿಲಾ ಮೂರ್ತಿಗಳು



ಶ್ರೀಸಂಗಮೇಶ್ವರ ದೇವಸ್ಥಾನ ಹಾಗೂ ಭ್ರಮರಾಂಬಿಕಾ ದೇವಸ್ಥಾನ (ಬಲಬದಿ)

**ನಿಮ್ಮ ಪ್ರವಾಸ ಸಂತಸದಾಯಕ ಹಾಗೂ ಸುಖಕರವಾಗಿರಲಿ**

## ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆಗಳು

**ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ವಿಜಾಪುರ.**

೯೪೪೮೯೯೯೩೬೧, ೯೪೪೯೬೪೫೭೮೬

ಈ-ಮೇಲ್ ವಿಳಾಸ : diet.bijapur@gmail.com.

**ಉಪನಿರ್ದೇಶಕರ ಕಾರ್ಯಾಲಯ, ವಿಜಾಪುರ.**

೯೪೪೮೯೯೯೩೩೭, ೯೪೪೮೯೯೯೩೮೯, ೯೪೮೦೬೯೫೪೧೦

ಈ-ಮೇಲ್ ವಿಳಾಸ : egov.bijapur@gmail.com.

## ವಿದ್ಯಾರ್ಥಿಗಳಿಗೆ ಉಚಿತ ಶೈಕ್ಷಣಿಕ ಪ್ರವಾಸ ಕಾರ್ಯಕ್ರಮ

ಶಿಕ್ಷಣ ಪ್ರತಿಯೊಂದು ಮಗುವಿನ ಮೂಲಭೂತ ಹಕ್ಕುಗಳಲ್ಲಿ ಒಂದು. ಶಾಲಾ ವಯಸ್ಸಿನ ಎಲ್ಲಾ ಮಕ್ಕಳನ್ನು ಶಾಲೆಗೆ ದಾಖಲಿಸಿ ಪ್ರಾಥಮಿಕ ಶಿಕ್ಷಣವನ್ನು ಅರ್ಥಪೂರ್ಣವಾಗಿ ಪ್ರತಿಯೊಬ್ಬ ವಿದ್ಯಾರ್ಥಿಯೂ ಪೂರ್ಣಗೊಳಿಸುವ ಉದ್ದೇಶದಿಂದ ಅನೇಕ ಪರಿಣಾಮಕಾರಿ ಅನುಭವಗಳನ್ನು ನೀಡುವುದರೊಂದಿಗೆ ಗುಣಮಟ್ಟದ ಶಿಕ್ಷಣವನ್ನು ಒದಗಿಸುವುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪಾಲುಗಾರಿಕೆಯ ಬೃಹತ್ ಯೋಜನೆಯಾದ ಸರ್ವ ಶಿಕ್ಷಣ ಅಭಿಯಾನ ಯೋಜನೆಯ ಗುರಿ ಸಾಧಿಸಲು ಮೇಲ್ಕಂಡ ವಿವಿಧೋದ್ದೇಶ ಚಟಿವಟಿಕೆಗಳನ್ನು ಆಯೋಜಿಸಿದೆ. ಈ ನಿಟ್ಟಿನಲ್ಲಿ ೫,೬, ಮತ್ತು ೭ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಸರ್ಕಾರಿ ಶಾಲೆಗಳ ಆಯ್ದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಹಾಗೂ ಇತರೆ ಹೆಣ್ಣು ಮಕ್ಕಳಿಗಾಗಿ **" ಚಿಣ್ಣರ ಸುವರ್ಣ ಜಿಲ್ಲಾ ದರ್ಶನ"** ಎಂಬ ಶೈಕ್ಷಣಿಕ ಪ್ರವಾಸ ಕಾರ್ಯಕ್ರಮವನ್ನು ಸರ್ವ ಶಿಕ್ಷಣ ಅಭಿಯಾನ, ಹಾಗೂ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಮಂಡ್ಯ ಇವರ ಸಹಯೋಗದೊಂದಿಗೆ ಅನುಷ್ಠಾನಗೊಳ್ಳುತ್ತಿದೆ.

## ಪ್ರವಾಸದ ಪ್ರಾಮುಖ್ಯತೆ

- ವೈವಿಧ್ಯಮಯ ಜನಜೀವನ, ಶಿಲ್ಪಕಲೆ, ಐತಿಹಾಸಿಕ ಕಟ್ಟಡಗಳ ಬಗ್ಗೆ ಧನಾತ್ಮಕ ಮನೋಭಾವನೆಗಳ ಸಂವರ್ಧನೆ.
- ವಿವಿಧ ಪ್ರದೇಶಗಳ ಸಂಸ್ಕೃತಿ ಹಾಗೂ ಪರಂಪರೆಗಳ ಪರಿಚಯ ಮತ್ತು ನಾಡು-ನುಡಿ ಕುರಿತಾಗಿ ಅಭಿಮಾನ ಬೆಳೆಸುವುದು.
- ವಾಸ್ತವ ಜೀವನ ಕುರಿತ ಮನೋಭಾವನೆಯಲ್ಲಿ ಬದಲಾವಣೆ.
- ಸಹಬಾಳ್ವೆ ಹಾಗೂ ಸಹಭಾಗಿತ್ವದ ಮಹತ್ವ ತಿಳಿಸುವುದು.
- ಇತರೆ ಧರ್ಮ, ಜಾತಿ ಹಾಗೂ ಪ್ರಾಂತ್ಯದ ಜನರೊಂದಿಗೆ ಸಂವೇದನೆ ಮತ್ತು ಸಹಕಾರ ಮನೋಭಾವ ಬೆಳೆಸುವುದು.
- ತನ್ನ ಸ್ಥಾನ ಹಾಗೂ ಕರ್ತವ್ಯಗಳ ಬಗ್ಗೆ ಅರಿವನ್ನು ಉಂಟುಮಾಡುವುದು.
- ಸರ್ವತೋಮುಖ ವ್ಯಕ್ತಿತ್ವ ವಿಕಾಸವನ್ನುಂಟು ಮಾಡುವುದು.
- ವೈಜ್ಞಾನಿಕ ಹಾಗೂ ತಾಂತ್ರಿಕ ಅಭಿವೃದ್ಧಿಯ ಬಗ್ಗೆ ಜ್ಞಾನವನ್ನು ಪಡೆಯುವುದು.

## ವಿದ್ಯಾರ್ಥಿ ಜೀವನದಲ್ಲಿ ಶೈಕ್ಷಣಿಕ ಪ್ರವಾಸದ ಅಗತ್ಯತೆ

- ಮಕ್ಕಳು ಶಿಕ್ಷಣದಲ್ಲಿ ಆಸಕ್ತಿ ಬೆಳೆಸಿಕೊಂಡು ಪಠ್ಯೇತರ ಹಾಗೂ ಶೈಕ್ಷಣಿಕ ಚಟುವಟಿಕೆಗಳಲ್ಲಿ ಹೆಚ್ಚು ಉತ್ಸಾಹದಿಂದ ಭಾಗವಹಿಸುವುದು.
- ಮಕ್ಕಳು ಶಾಲೆಯತ್ತ ಹೆಚ್ಚು ಆಕರ್ಷಿತರಾಗಿ ಹಿರಿಯ ಪ್ರಾಥಮಿಕ ಹಂತದಲ್ಲಿ ಶಾಲೆ ಬಿಡುವ ಸಾಧ್ಯತೆಗಳನ್ನು ಕಡಿಮೆ ಮಾಡುವುದು.
- ಮಕ್ಕಳಲ್ಲಿ ಪಠ್ಯವಸ್ತುವಿನ ಸಾಮರ್ಥ್ಯಗಳ ಬೆಳವಣಿಗೆಗೆ ಸಹಕಾರಿಯಾಗುವುದು.
- ವಿದ್ಯಾರ್ಥಿಗಳಲ್ಲಿ ವೀಕ್ಷಣೆ, ಮೌಖಿಕ ಹಾಗೂ ಲಿಖಿತ ಕೌಶಲಗಳ ಸಂವರ್ಧನೆ ಮಾಡುವುದು.
- ಮಕ್ಕಳಲ್ಲಿ ಕೀಳರಿಮೆ ಹೋಗಲಾಡಿಸುವುದು.
- ಮಕ್ಕಳಲ್ಲಿ ಸಹಬಾಳ್ವೆಯ ಮಹತ್ವ ಬೆಳೆಸುವುದು.
- ಸ್ವಾಭಾವಿಕ ಸನ್ನಿವೇಶಗಳ ಮುಖಾಂತರ ಶಿಕ್ಷಣವನ್ನು ದೊರಕಿಸುವುದು.
- ಮಕ್ಕಳಲ್ಲಿ ಜ್ಞಾನ, ಕಲಾಭಿರುಚಿ ಹಾಗೂ ಕುತೂಹಲಗಳನ್ನು ಬೆಳೆಸುವುದು.
- ಪಠ್ಯಪುಸ್ತಕದಲ್ಲಿನ ಮಾಹಿತಿ ಹಾಗೂ ಹೊರ ಪ್ರಪಂಚದ ವಾಸ್ತವ್ಯದ ನಡುವೆ ಇರುವ ಅಂತರವನ್ನು ಅರ್ಥೈಸುವುದು.
- ಸೆಮಿಸ್ಟರ್ ಪದ್ಧತಿಯ ಗುಂಪು ಚಟುವಟಿಕೆ ಹಾಗೂ ವೈಯಕ್ತಿಕ ಚಟುವಟಿಕೆಗಳನ್ನೊಳಗೊಂಡ ಯೋಜನೆಗಳನ್ನು ತಯಾರಿಸಲು ಮಕ್ಕಳಲ್ಲಿ ಮನೋಸ್ಥೈರ್ಯ ಬೆಳೆಸುವುದು.
- ವಿವಿಧ ಪ್ರದೇಶಗಳ ಸಂಸ್ಕೃತಿ ಪರಂಪರೆ, ನಾಡು-ನುಡಿಯನ್ನು ಪರಿಚಯಿಸುವುದು.
- ಮಕ್ಕಳ ಸೃಜನಾತ್ಮಕ ಚಟುವಟಿಕೆಗಳನ್ನು ಪ್ರೋತ್ಸಾಹಿಸುವುದು.
- ಕಲಿಯುವಿಕೆಗೆ ಸ್ವತಂತ್ರವಾದ ವಾತಾವರಣವನ್ನು ನಿರ್ಮಿಸುವುದು.
- ಕಲಿಕೆಯನ್ನು ಶಾಶ್ವತಗೊಳಿಸುವುದು.
- ವಿದ್ಯಾರ್ಥಿಗಳನ್ನು ಸ್ವಯಂ ಪ್ರೇರಣೆಯಿಂದ ಪಾಲ್ಗೊಳ್ಳಲು ಪ್ರೋತ್ಸಾಹಿಸುವುದು.
- ವಿದ್ಯಾರ್ಥಿಗಳಲ್ಲಿ ರಾಷ್ಟ್ರೀಯ ಭಾವನೆ, ಸಮಾಜ ಸೇವೆ ಭಾವೈಕ್ಯತೆ, ದೇಶಪ್ರೇಮ ಮುಂತಾದ ಸದ್ಗುಣಗಳನ್ನು ಬೆಳೆಸುವುದು.

## ಪ್ರವಾಸದ ಸ್ಥಳಗಳ ಆಯ್ಕೆ

- ಐತಿಹಾಸಿಕ, ಧಾರ್ಮಿಕ, ನೈಸರ್ಗಿಕ ಹಾಗೂ ಶೈಕ್ಷಣಿಕ ಮಹತ್ವದ ಜಿಲ್ಲೆಯಲ್ಲಿನ ಪ್ರೇಕ್ಷಣೀಯ ಸ್ಥಳಗಳು.
- ವಿದ್ಯಾರ್ಥಿಗಳಿಗೆ ಹೊಸ ಅನುಭವವನ್ನು ನೀಡುವ ರಾಜ್ಯದಲ್ಲಿನ ದೂರದ ಪ್ರದೇಶಗಳು

## ಪ್ರವಾಸದ ಮುಖ್ಯಾಂಶಗಳು

- ಎರಡು ದಿನ ಹಾಗೂ ಒಂದು ರಾತ್ರಿಯ ಉಚಿತ ಪ್ರವಾಸ.
- ಉತ್ತಮವಾದ ಊಟ, ಕಾಫಿ, ತಿಂಡಿ, ವಸತಿ ಇತ್ಯಾದಿ.
- ಎಲ್ಲಾ ಪ್ರೇಕ್ಷಣೀಯ ಸ್ಥಳಗಳಲ್ಲಿ ಉಚಿತ ಪ್ರವೇಶ ವ್ಯವಸ್ಥೆ.
- ಪ್ರತಿ ತಂಡಕ್ಕೆ ಅನುಭವಿ ಶಿಕ್ಷಕರು ಹಾಗೂ ಪ್ರವಾಸೋದ್ಯಮ ಇಲಾಖೆಯ ಮಾರ್ಗದರ್ಶಕರು.
- ಪ್ರವಾಸದ ಅವಧಿಯಲ್ಲಿ ತಾಲ್ಲೂಕು, ಜಿಲ್ಲೆಯಲ್ಲಿನ ಮಾಹಿತಿ ಕೇಂದ್ರಗಳು.
- ಪ್ರಥಮ ಚಿಕಿತ್ಸೆ ಸೌಲಭ್ಯ.
- ಪ್ರತಿ ತಂಡದ ಮೌಲ್ಯಮಾಪನ ಮತ್ತು ದಾಖಲೀಕರಣ. ಮಕ್ಕಳಿಗೆ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಿ ವಿಜೇತ ಮಕ್ಕಳಿಗೆ ಬಹುಮಾನ.
- ಮಾರ್ಗಸೂಚಿ, ಜಿಲ್ಲೆಯ ನಕ್ಷೆ, ನೋಟ್ ಪುಸ್ತಕ, ಪೆನ್, ಚಿತ್ರಕಲೆ ಹಾಗೂ ಇತರೆ ಚಟುವಟಿಕೆಗಳಿಗೆ ಅವಶ್ಯಕ ಲೇಖನ ಸಾಮಗ್ರಿಗಳನ್ನು ಮತ್ತು ಟೋಪಿಗಳನ್ನು ಉಚಿತವಾಗಿ ಒದಗಿಸುವ ವ್ಯವಸ್ಥೆ.

## ವಿದ್ಯಾರ್ಥಿಗಳು ಪ್ರವಾಸದ ಸಮಯದಲ್ಲಿ ಪಾಲಿಸಬೇಕಾದ ನಿಯಮಗಳು

## ನೀವು ಪಾಲಿಸಬೇಕಾದ ಅಂಶಗಳು

- ಬಸ್ಸಿನಲ್ಲಿ ಪ್ರಯಾಣ ಮಾಡುವಾಗ ಸುತ್ತಲಿನ ಪರಿಸರವನ್ನು ತಪ್ಪದೆ ಗಮನಿಸಬೇಕು.
- ವಿವಿಧ ಸ್ಥಳಗಳಲ್ಲಿ ಜನರ ಭಾಷೆ, ಧರಿಸುವ ಉಡುಪು, ಗುಣ-ನಡತೆ, ಆದರ-ಸತ್ಕಾರಗಳು, ಜೀವನ ಶೈಲಿ, ತಿಂಡಿ-ತಿನಿಸುಗಳಲ್ಲಿ ಇರುವ ವೈವಿಧ್ಯತೆಗಳನ್ನು ಗಮನಿಸಬೇಕು.
- ಪ್ರತಿ ದಿನದ ದಿನಚರಿಯನ್ನು ಬರೆಯುವುದು.
- ಸ್ಥಳಗಳ ಬಗ್ಗೆ ಮಾಹಿತಿಯನ್ನು ಶಿಕ್ಷಕರಿಂದ ಅಥವಾ ಮಾರ್ಗದರ್ಶಕರಿಂದ ಕೇಳಿ ತಿಳಿಯಬೇಕು.
- ವೇಳಾಪಟ್ಟಿಯಂತೆ, ವಿದ್ಯಾರ್ಥಿ ಗುಂಪಿನ ನಾಯಕರು, ಪ್ರವಾಸಿ ಮಾರ್ಗದರ್ಶಕರು ಹಾಗೂ ಶಿಕ್ಷಕರು ನೀಡುವ ಸೂಚನೆಯಂತೆ ಸಮಯ ಪಾಲನೆ ಮಾಡಬೇಕು.
- ಪ್ರವಾಸದಲ್ಲಿ ನಿಮಗೆ ಅಥವಾ ನಿಮ್ಮ ಸ್ನೇಹಿತರಿಗೆ ಉಂಟಾಗುವ ತೊಂದರೆಗಳಿಗೆ ಕೂಡಲೇ ಶಿಕ್ಷಕರನ್ನು ಸಂಪರ್ಕಿಸಬೇಕು.
- ಬಸ್ಸಿನಿಂದ ಇಳಿದು ಸ್ಥಳಗಳ ವೀಕ್ಷಣೆಗೆ ಸಾಲಾಗಿ ಸಾಗಬೇಕು.
- ನೀರು ಅಥವಾ ಇಳಿಜಾರು ಸ್ಥಳಕ್ಕೆ ಭೇಟಿ ನೀಡಿದಾಗ ಶಿಕ್ಷಕರು ನೀಡುವ ಸೂಚನೆಗಳನ್ನು ಪಾಲಿಸಿ ಎಚ್ಚರದಿಂದಿರಬೇಕು.
- ಚಳಿಗಾಲದಲ್ಲಿ ಬೆಚ್ಚನೆಯ ಉಡುಪುಗಳನ್ನು ಒಯ್ಯುವುದು.
- ಪ್ರವಾಸ ಕಾಲದಲ್ಲಿ ವೈಯಕ್ತಿಕ ಕೆಲಸವನ್ನು ಪ್ರತಿಯೊಬ್ಬರು ತಾವೇ ನಿರ್ವಹಿಸಬೇಕು.
- ಶುಚಿಯಾದ ನೀರನ್ನೇ ಕೇಳಿ ಪಡೆದು ಕುಡಿಯಬೇಕು.

- ನಿಮಗೆ ಹಂಚಿಕೆ ಮಾಡಲಾಗುವ ಮಲಗುವ ಕೋಣೆಯಲ್ಲಿಯೇ ನೀವು ಮಲಗಬೇಕು.
- ಪ್ರತಿ ದಿನದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕಡ್ಡಾಯವಾಗಿ ಎಲ್ಲರೂ ಭಾಗವಹಿಸಬೇಕು.
- ನಿಮ್ಮ ವಸ್ತುಗಳ ಬಗ್ಗೆ ಎಚ್ಚರಿಕೆ ವಹಿಸಬೇಕು.
- ಕುಡಿಯುವ ನೀರು ಹಾಗೂ ಒಂದು ಕೈ ಒರೆಸುವ ಬಟ್ಟೆ ನಿಮ್ಮ ಕೈಗೆ ಕೂಡಲೆ ಸಿಗುವಂತೆ ಇಟ್ಟುಕೊಳ್ಳಿ.
- ನಿಮ್ಮ ಶಿಕ್ಷಕರು ಹಾಜರಾತಿಯನ್ನು ತೆಗೆದುಕೊಳ್ಳುವಾಗ ನಿಶ್ಯಬ್ದತೆಯಿಂದ ಇರಬೇಕು.
- ಪ್ರತಿ ಮುಂಜಾನೆ ಹಾಗೂ ರಾತ್ರಿ ಶಿಕ್ಷಕರು ಹೇಳಿಕೊಡುವ ಪ್ರಾರ್ಥನೆಯಲ್ಲಿ ಭಾಗವಹಿಸಬೇಕು.
- ವಾತಾವರಣವನ್ನು ಕಲುಷಿತಗೊಳಿಸದಿರಿ. ಶಿಸ್ತು ಮತ್ತು ಸಭ್ಯತೆಯಿಂದ ನಡೆದುಕೊಳ್ಳಬೇಕು.

## ನೀವು ಹೀಗೆ ಮಾಡದಿರಿ

- ಬಸ್ಸಿನ ಕಿಟಕಿಗಳಿಂದ ತಲೆ ಅಥವಾ ಕೈಗಳನ್ನು ಹೊರ ಚಾಚಬಾರದು.
- ಬೆಲೆ ಬಾಳುವ ವಸ್ತು/ಆಭರಣಗಳನ್ನು ಕೊಂಡೊಯ್ಯಬಾರದು.
- ಪ್ರವಾಸ ಸಮಯದಲ್ಲಿ ಅಂಗಡಿ ತಿಂಡಿಗಳನ್ನಾಗಲಿ ಅಥವಾ ಮನೆಯಿಂದ ತಂದ ಕರಿದ ತಿಂಡಿಗಳನ್ನು ತಿನ್ನಬಾರದು.
- ಅರ್ಧರಾತ್ರಿಯಲ್ಲಿ ಒಬ್ಬರೆ ಎದ್ದು ಹೊರಗೆ ಹೋಗಬಾರದು.
- ನೀವು ಕೋಪ ಮಾಡಿಕೊಳ್ಳುವುದಾಗಲಿ/ತುಂಟತನವನ್ನಾಗಲಿ ಮಾಡಿಕೊಳ್ಳಬಾರದು.

## ಶಿಕ್ಷಕರಿಗೆ ಮಾರ್ಗಸೂಚಿ ಮತ್ತು ಸೂಚನೆಗಳು, ನಿರ್ವಹಿಸಬೇಕಾದ ಅಂಶಗಳು

- ಪ್ರವಾಸ ಕಾಲದಲ್ಲಿ ಮಗುವಿಗೆ ಕಲಿಯುವ ಅನುಭವಗಳನ್ನು ಹಾಗೂ ವಾತಾವರಣವನ್ನು ಸೃಷ್ಟಿಸಬೇಕು.
- ಪ್ರತಿಯೊಂದು ಮಗುವನ್ನು ಸಮಾನವಾಗಿ ಕಂಡು ಎಲ್ಲರಿಗೂ ಸಮಾನ ಅವಕಾಶ ಕಲ್ಪಿಸಬೇಕು.
- ವಿದ್ಯಾರ್ಥಿಗಳಿಗೆ ಯಾವುದೇ ಸಂದರ್ಭದಲ್ಲಿ ತೊಂದರೆಯಾಗದಂತೆ ಶಿಕ್ಷಕರು ಜವಾಬ್ದಾರಿಯನ್ನು ವಹಿಸಬೇಕು.
- ವಿದ್ಯಾರ್ಥಿಗಳು ಬಸ್ಸಿನ ಕಿಟಕಿಗಳಿಂದ ಕೈ ಅಥವಾ ತಲೆಯನ್ನು ಹೊರಚಾಚದಂತೆ ಎಚ್ಚರಿಕೆ ವಹಿಸಬೇಕು.
- ವಿದ್ಯಾರ್ಥಿಗಳನ್ನು ತಂಡಗಳಾಗಿ ವಿಂಗಡಿಸಿ ಹೆಣ್ಣು ಮಕ್ಕಳ ಗುಂಪಿನ ಜವಾಬ್ದಾರಿಯನ್ನು ಶಿಕ್ಷಕಿಯರು ವಹಿಸಬೇಕು.
- ಪ್ರತಿ ಹಂತದಲ್ಲಿ ವಿದ್ಯಾರ್ಥಿಗಳ ಹಾಜರಾತಿ ಪರೀಕ್ಷಿಸಬೇಕು.
- ಎಲ್ಲಾ ಶಿಕ್ಷಕರು ಸಹಕಾರ ಮನೋಭಾವದಿಂದ ಹೊಣೆಗಾರಿಕೆಯನ್ನು ನಿರ್ವಹಿಸಬೇಕು.
- ವಿದ್ಯಾರ್ಥಿಗಳು ಸಮಯಕ್ಕೆ ಸರಿಯಾಗಿ ಸಿದ್ಧರಾಗಲು ಪ್ರೇರೇಪಿಸಬೇಕು.
- ಪ್ರತಿ ಮಗುವಿನ ಹಿನ್ನೆಲೆಯನ್ನು ಅರಿಯಲು ಪ್ರಯತ್ನಿಸಬೇಕು ಹಾಗೂ ಅಗತ್ಯ ಸಹಕಾರವನ್ನು ನೀಡಬೇಕು.
- ಹೆಣ್ಣು ಮಕ್ಕಳ ಕೋಣೆಯಲ್ಲಿ ಶಿಕ್ಷಕಿಯರು ಕಡ್ಡಾಯವಾಗಿ ಮಲಗಬೇಕು.
- ಹೆಣ್ಣುಮಕ್ಕಳಲ್ಲಿ ಉಂಟಾಗುವ ತೊಂದರೆಗಳಿಗೆ ಶಿಕ್ಷಕಿಯರು ಗಮನಹರಿಸಬೇಕು.
- ಎಲ್ಲಾ ವಿದ್ಯಾರ್ಥಿಗಳಿಗೆ ನಿಯಮಿತ ಹಾಗೂ ಮಿತವಾದ ಭೋಜನ ಮಾಡುವಂತೆ ತಿಳಿಹೇಳಬೇಕು.
- ವಿದ್ಯಾರ್ಥಿಗಳಿಗೆ ಶುದ್ಧ ನೀರು ಒದಗಿಸಲು ವ್ಯವಸ್ಥೆ ಮಾಡುವುದು.
- ಗಂಭೀರವಾಗಿ ಅನಾರೋಗ್ಯದಿಂದ ಬಳಲುವ ಮಗುವಿನ ಆರೈಕೆ ಶಿಕ್ಷಕರ ಜವಾಬ್ದಾರಿಯಾಗಿರುತ್ತದೆ.

- ನೀರು ಅಥವಾ ಇಳಿಜಾರು ಸ್ಥಳಗಳಲ್ಲಿ ಮಕ್ಕಳ ಬಗ್ಗೆ ಎಚ್ಚರಿಕೆ ವಹಿಸಬೇಕು.
- ಎಲ್ಲಾ ಸ್ಥಳಗಳಲ್ಲಿ ಶಿಸ್ತು ಹಾಗೂ ಸಭ್ಯತೆಯಿಂದ ವರ್ತಿಸಲು ಮಕ್ಕಳಿಗೆ ಪ್ರೇರೇಪಿಸಬೇಕು.
- ಯಾವುದೇ ಮಗು ಗುಂಪನ್ನು ಬಿಟ್ಟು ಹೋಗದಂತೆ ನಿಗಾ ವಹಿಸಬೇಕು.
- ಪ್ರತಿದಿನ ಮುಂಜಾನೆ ಸಾಮೂಹಿಕ ಪ್ರಾರ್ಥನೆ ಮತ್ತು ರಾತ್ರಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಬೇಕು.
- ಪ್ರತಿದಿನದ ದಿನಚರಿಯನ್ನು ವಿದ್ಯಾರ್ಥಿಗಳಾದಿಯಾಗಿ ಶಿಕ್ಷಕರೂ ನಿರ್ವಹಿಸಬೇಕು.
- ಕೆಳಕಂಡ ದಾಖಲೆಗಳನ್ನು ಕಡ್ಡಾಯವಾಗಿ ನಿರ್ವಹಿಸಬೇಕು.
- ಈ ವಿದ್ಯಾರ್ಥಿಗಳ ಹಾಜರಾತಿ ಮತ್ತು ಶಿಕ್ಷಕರ ವಿವರ
- ಈ ದಿನಚರಿ
- ಈ ಸಾಂಸ್ಕೃತಿಕ ಕಾರ್ಯಕ್ರಮಗಳ ವಿವರ
- ಈ ವಿದ್ಯಾರ್ಥಿಗಳು ಬರೆದ ಕವನ/ಚುಟುಕ/ಚಿತ್ರಕಲೆ ಇತ್ಯಾದಿ.
- ಇಡೀ ಪ್ರವಾಸದ ಸಂದರ್ಭದಲ್ಲಿ ಸನ್ನಡತೆಯಿಂದ ನಡೆದುಕೊಂಡು ಸಹಕರಿಸಿದ ವಿದ್ಯಾರ್ಥಿಗಳನ್ನು ಗುರುತಿಸಬೇಕು.
- ವಿದ್ಯಾರ್ಥಿಗಳಿಗೆ ನೀಡಲಾಗುವ ಜಿಲ್ಲೆಯ ನಕ್ಷೆಯಲ್ಲಿ ವೀಕ್ಷಿಸಿದ ಸ್ಥಳಗಳನ್ನು ಗುರುತಿಸಲು ಸಹಕರಿಸಬೇಕು.
- ಶಿಕ್ಷಕರು ಒಟ್ಟಾಗಿ ಸೇರಿ ತಮ್ಮ ತಂಡದ ವರದಿಯನ್ನು ಸಿದ್ಧಗೊಳಿಸಿ ಪ್ರವಾಸದ ಅಂತ್ಯದಲ್ಲಿ ತಮ್ಮ ಅಧಿಕಾರಿಗಳಿಗೆ ಸಲ್ಲಿಸಬೇಕು.
- ಪ್ರವಾಸೋದ್ಯಮ ಇಲಾಖೆಯಿಂದ ನಿಯೋಜಿಸಿರುವ ಪ್ರವಾಸೋದ್ಯಮ ಇಲಾಖೆಯ ಸಮನ್ವಯಾಧಿಕಾರಿಗಳು ಕಾಲಕಾಲಕ್ಕೆ ನೀಡಲಾಗುವ ಸಲಹೆ ಮತ್ತು ಸೂಚನೆಗಳನ್ನು ಪಾಲಿಸಬೇಕು.

## ಶಿಕ್ಷಕರೆ ಹೀಗೆ ಮಾಡದಿರಿ !

- ಶಿಕ್ಷಕರ ನಡುವೆ ಯಾವುದೇ ಭಿನ್ನಾಭಿಪ್ರಾಯಕ್ಕೆ ಅವಕಾಶ ನೀಡಬಾರದು.
- ಬೆಲೆಬಾಳುವ ವಸ್ತುಗಳನ್ನು ವಿದ್ಯಾರ್ಥಿಗಳಾದಿಯಾಗಿ ಶಿಕ್ಷಕರೂ ಸಹ ಹೊಂದಿರಬಾರದು.
- ಬಸ್ಸಿನಲ್ಲಿ ಎಲ್ಲಾ ಶಿಕ್ಷಕರು ಒಂದೇ ಕಡೆ ಕುಳಿತುಕೊಳ್ಳಬಾರದು.
- ಮಕ್ಕಳಿಗಿಂತ ಮೊದಲು ಸ್ಥಳಗಳನ್ನು ಕಾಯ್ದಿರಿಸಲು ಮುನ್ನುಗ್ಗಬಾರದು.
- ಯಾವುದೇ ಶಿಕ್ಷಕರು ತಾವು ಭೇಟಿ ನೀಡಿದ ಸ್ಥಳಗಳಲ್ಲಿ ತಮ್ಮ ಪರಿಚಯದವರನ್ನು,
- ಸಂಬಂಧಿಗಳನ್ನು ನೋಡುವ ಅಥವಾ ವೈಯಕ್ತಿಕ ಕಾರ್ಯಗಳ ಸಲುವಾಗಿ ತಂಡವನ್ನು ಬಿಟ್ಟು ತೆರಳಬಾರದು.
- ಶಿಕ್ಷಕರು ಧೂಮಪಾನ ಮಾಡುವುದು ಅಥವಾ ಇನ್ನಿತರೆ ದುಶ್ಚಟಗಳಲ್ಲಿ ತೊಡಗಬಾರದು.
- ಈ ಕುರಿತು ಇಲಾಖೆಯ ಗಮನಕ್ಕೆ ಬಂದಲ್ಲಿ ಶಿಸ್ತಿನ ಕ್ರಮ ಜರುಗಿಸಲಾಗುವುದು.
- ಯಾವುದೇ ಹೆಚ್ಚಿನ ಅನಾರೋಗ್ಯದಿಂದ ಪ್ರವಾಸದ ಮಾರ್ಗಮಧ್ಯದಲ್ಲಿ ಬಳಲುತ್ತಿದ್ದಲ್ಲಿ,  ಮಗುವನ್ನು ಒಂಟಿಯಾಗಿ ಬಿಡಬಾರದು.

## ರಚನಾ ತಂಡ

ಚಿಣ್ಣರ ವಿಜಾಪುರ ಜಿಲ್ಲಾ ದರ್ಶನ

**ಶೈಕ್ಷಣಿಕ ಪ್ರವಾಸ ಕೈಪಿಡಿ ೨೦೦೯-೧೦**

ಕೈಪಿಡಿ ಸಾಹಿತ್ಯ ರಚನಾ ಸಮೀತಿ.

ಸಲಹೆ ಹಾಗೂ ಮಾರ್ಗದರ್ಶನ

**ಶ್ರೀ ಸಿ. ವ್ಹಿ. ಹಿರೇಮಠ**

ಉಪನಿರ್ದೇಶಕರು (ಅಭಿವೃದ್ಧಿ)

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ವಿಜಾಪುರ.

**ಮುಖ್ಯಸ್ಥರು :**

**ಶ್ರೀ ಜೆ. ಜೆ. ದೊಡ್ಡಮನಿ**

ಹಿರಿಯ ಉಪನ್ಯಾಸಕರು ಡಯಟ್, ವಿಜಾಪುರ.

**ಸಹಾಯ :**

**ಶ್ರೀ ವ್ಹಿ. ಎಚ್. ಬುಡ್ಡರ**

ಉಪನ್ಯಾಸಕರು ಡಯಟ್, ವಿಜಾಪುರ.

**ಸಾಹಿತ್ಯ ರಚನಾ ತಂಡದ ಸದಸ್ಯರು**

ಶ್ರೀ ಹ. ಮ. ಪೂಜಾರ

ಶ್ರೀ ಜೆ. ಎಸ್. ಕಂಚ್ಯಾಣಿ

ಶ್ರೀ ಎಸ್. ಬಿ. ಬರಗುಂಡಿ

ಶ್ರೀ ಎನ್. ವ್ಹಿ. ಬಾಬಾನಗರ

ಶ್ರೀ ಪಿ. ಎಲ್. ಮಿಂಚನಾಳ

ಶ್ರೀ ಕೆ. ಎನ್. ಸಾಳುಂಕೆ

ಶ್ರೀ ಎಸ್. ಎಂ. ಹದಿಮೂರ

ಡಾ. ಕೆ. ಎಂ. ಇಂಡಿ

ಶ್ರೀ ಪ. ಗು. ಸಿದ್ಧಾಪೂರ

ಶ್ರೀ ಬಿ. ಎಚ್. ತಿಳಗೂಳ

ಶ್ರೀ ಎಸ್. ಎಂ. ಜೇವರಗಿ

ಶ್ರೀಮತಿ ರುಕ್ಮಿಣಿ ಬಿಂಜಲಭಾವಿ

ಶ್ರೀ ಮಂಜುನಾಥ ಮಾನೆ

# ಪರಿಷ್ಕೃತ ಸುತ್ತೋಲೆ

**ಸರ್ವ ಶಿಕ್ಷಣ ಅಭಿಯಾನ – ಕರ್ನಾಟಕ**

**ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳ ಪೂರಕ ಕಟ್ಟಡ.**

ನೃಪತುಂಗ ರಸ್ತೆ. ಬೆಂಗಳೂರು - ೫೬೦೦-೦೧

ಸಂಖ್ಯೆ : ಸಶಿಅ/ಹೆಮಶಿ/ಚೆಕದ/೨೦೦೯-೧೦ ದಿನಾಂಕ :೨೮.೭.೨೦೦೯

ವಿಷಯ: ೨೦೦೯-೧೦ನೇ ಸಾಲಿನ ಚಿಣ್ಣರ ಜಿಲ್ಲಾ ದರ್ಶನ ಕುರಿತಂತೆ ಮಾರ್ಗಸೂಚಿ.

ಸರ್ವಶಿಕ್ಷಣ ಅಭಿಯಾನ ಯೋಜನೆಯಡಿಯಲ್ಲಿ ರಾಜ್ಯದ ಗ್ರಾಮಾಂತರ ಪ್ರದೇಶದಲ್ಲಿನ ಮಕ್ಕಳ ವ್ಯಕ್ತಿತ್ವದ ಸರ್ವತೋಮುಖ ಅಭಿವೃದ್ಧಿ, ಒಂದು ಪ್ರಮುಖ ಗುರಿಯಾಗಿದ್ದು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳ ೭ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಪ.ಜಾ/ಪ.ವ ಹಾಗೂ ಹೆಣ್ಣು ಮಕ್ಕಳಿಗಾಗಿ 'ಚಿಣ್ಣರ ವ್ಯಕ್ತಿತ್ವ ವಿಕಸನ-ಕರ್ನಾಟಕ ಪರಿಚಯ' ಎಂಬ ಶೈಕ್ಷಣಿಕ ಪ್ರವಾಸವನ್ನು ೨೦೦೪-೦೫ ಹಾಗೂ ೨೦೦೬-೦೭, ೨೦೦೭-೦೮ ಹಾಗೂ ೨೦೦೮-೦೯ನೇ ಸಾಲಿನಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದೆ. ೨೦೦೯-೧೦ ನೇ ಸಾಲಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳನ್ನು ಸದರಿ ಚಟುವಟಿಕೆಯ ಫಲಾನುಭವಿಗಳನ್ನಾಗಿಸಲು ಹಾಗೂ ತಮ್ಮ ಜಿಲ್ಲೆಯನ್ನು ಸಮಗ್ರವಾಗಿ ಅರಿಯುವ ನಿಟ್ಟಿನಲ್ಲಿ ೪ ದಿನದ **"ಚಿಣ್ಣರ ಕರ್ನಾಟಕ ದರ್ಶನದ"** ಬದಲಿಗೆ ೨ ದಿನದ **"ಚಿಣ್ಣರ ಜಿಲ್ಲಾ ದರ್ಶನ"** ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ.

## ಚಿಣ್ಣರ ಜಿಲ್ಲಾ ದರ್ಶನದ ಸಾಮಾನ್ಯ ಉದ್ದೇಶಗಳು :-

- ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಪರಿಪೂರ್ಣವಾಗಿ ಜಿಲ್ಲೆಯ ಮುಖ್ಯವಾದ ಸ್ಥಳಗಳು ಅಂದರೆ ಸ್ಥಳೀಯ ವೈಜ್ಞಾನಿಕ, ಧಾರ್ಮಿಕ, ಭೌಗೋಳಿಕ, ನೈಸರ್ಗಿಕ, ಐತಿಹಾಸಿಕ, ವಿಜ್ಞಾನ ಮತ್ತು ಕೈಗಾರಿಕೆಗಳು, ಉತ್ತಮ ಶಾಲೆ, ಆಕಾಶವಾಣಿ ಕೇಂದ್ರ, ಗಣಿಗಳು, ಉದ್ಯಾನವನ, ಮ್ಯೂಸಿಯಂ, ಪ್ರಖ್ಯಾತ ವ್ಯಕ್ತಿಗಳು ಹುಟ್ಟಿದ ಊರು ಇತ್ಯಾದಿಯನ್ನು ಅರಿಯುವುದು.
- ಮಕ್ಕಳು ತಮ್ಮ ಶೈಕ್ಷಣಿಕ ಜೀವನವನ್ನು ರೂಪಿಸಿಕೊಳ್ಳಲು ಸಹಕಾರಿಯಾಗುವಂತೆ ಮಾರ್ಗದರ್ಶನವನ್ನು ನೀಡುವುದು.
- ಮಕ್ಕಳಲ್ಲಿ ಸಹಕಾರ, ಹೊಂದಾಣಿಕೆ, ನಾಯಕತ್ವ ಮನೋಭಾವವನ್ನು ಬೆಳೆಸುವುದು.
- ತಮ್ಮ ಜಿಲ್ಲೆಯ ಸಾಂಸ್ಕೃತಿಕ ಪರಂಪರೆಯ ಅರಿವು ಹಾಗೂ ಅಭಿವೃದ್ಧಿಗೊಳಿಸುವಲ್ಲಿ ಮಕ್ಕಳ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುವುದು.
- ತಮ್ಮ ಜಿಲ್ಲೆಯ ಸಾಮಾಜಿಕ ಸ್ಥಿತಿಗತಿಯ ಕುರಿತು ಅರಿವುಂಟು ಮಾಡುವುದು.
- ಮಕ್ಕಳಿಗೆ ನೈಜ ಪರಿಸರದ ದರ್ಶನ ಮಾಡಿಸುವುದು.
- ತರಗತಿ ಕಲಿಕೆಗೆ ಪೂರಕವಾದ ಮಾಹಿತಿ ಒದಗಿಸುವುದು.
- ಶಾಲಾ ಚಟುವಟಿಕೆಗಳನ್ನು, ಹೊರಪ್ರಪಂಚ ಹಾಗೂ ಸಮಾಜದೊಂದಿಗೆ ಸಮನ್ವಯಗೊಳಿಸುವುದು.
- ತಮ್ಮ ಜಿಲ್ಲೆಯ ಐತಿಹಾಸಿಕ ವಿಷಯಗಳ ನೈಜ ಸ್ಥಿತಿಯ ದರ್ಶನ ಮಾಡಿಸುವುದು.
- ಪ್ರಾದೇಶಿಕ ಮಟ್ಟದ ಜನಜೀವನ, ಭಾಷೆ, ಆಚಾರವಿಚಾರಗಳಲ್ಲಿನ ವೈವಿಧ್ಯತೆಯ ಅರಿವುಂಟು ಮಾಡುವುದು.

## ನಿರ್ದಿಷ್ಟ ಉದ್ದೇಶಗಳು

- ಮಕ್ಕಳು ಶಿಕ್ಷಣದಲ್ಲಿ ಆಸಕ್ತಿ ಬೆಳಸಿಕೊಂಡು ಪಠ್ಯೇತರ ಹಾಗೂ ಶೈಕ್ಷಣಿಕ ಚಟುವಟಿಕೆಗಳಲ್ಲಿ ಹೆಚ್ಚು ಉತ್ಸಾಹದಿಂದ ಭಾಗವಹಿಸುವುದು.ಮಕ್ಕಳು ಶಾಲೆಯತ್ತ ಹೆಚ್ಚು ಆಕರ್ಷಿತರಾಗಿ ಶಾಲೆ ಬಿಡುವ ಸಾಧ್ಯತೆಗಳು ಕಡಿಮೆಯಾಗುವುದು.
- ಆರ್ಥಿಕವಾಗಿ ಹಿಂದುಳಿದ ಮಕ್ಕಳು ಹಾಗೂ ಹೆಣ್ಣು ಮಕ್ಕಳು ತಮ್ಮ ಜಿಲ್ಲೆಯ ಅನೇಕ ಸ್ಥಳಗಳ ನೈಜ ಪರಿಸರ ದರ್ಶನ ಪಡೆಯಲು ಸಹಕಾರಿಯಾಗುವುದು.
- ಮಕ್ಕಳ ಕೀಳಿರಿಮೆ ಹೋಗಲಾಡಿಸುವುದು.
- ಮಕ್ಕಳಲ್ಲಿ ಸ್ಪರ್ಧಾತ್ಮಕ ಮನೋಭಾವ ಬೆಳೆಸುವುದು.
- ಮಕ್ಕಳಲ್ಲಿ ಪಠ್ಯವಸ್ತುವಿನ ಸಾಮರ್ಥ್ಯಗಳ ಬೆಳವಣಿಗೆಗೆ ಸಹಕಾರಿಯಾಗುವುದು.
- ಸೆಮಿಸ್ಟರ್ ಪದ್ಧತಿಯ ಗುಂಪು ಚಟುವಟಿಕೆ ಹಾಗೂ ವೈಯುಕ್ತಿಕ ಚಟುವಟಿಕೆಗಳನ್ನೊಳಗೊಂಡ ಯೋಜನೆಗಳನ್ನು ತಯಾರಿಸಲು ಮಕ್ಕಳಲ್ಲಿ ಮನೋಸ್ಥೈರ್ಯ ಬೆಳೆಸುವುದು.
- ವಿದ್ಯಾರ್ಥಿಗಳಲ್ಲಿ ವೀಕ್ಷಣೆ, ಮೌಖಿಕ ಹಾಗೂ ಲಿಖಿತ ಕೌಶಲ್ಯಗಳ ಸಂವರ್ಧನೆ ಮಾಡುವುದು.
- ನೋಡಿ ಕಲಿಯುವುದರಿಂದ ಅನೇಕ ಪರಿಕಲ್ಪನೆಗಳು ಸ್ಪಷ್ಟವಾಗುವುದು.

ಮಕ್ಕಳಿಗೆ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗುತ್ತದೆ. ಮಕ್ಕಳ ದಾಖಲಾತಿ, ಹಾಜರಾತಿ ಉತ್ತಮವಾಗುತ್ತದೆ. ಒಟ್ಟಾರೆ ಗುಣಮಟ್ಟದ ಶಿಕ್ಷಣ ನೀಡುವ ದಿಸೆಯಲ್ಲಿ ಎಲ್ಲಾ ಮಕ್ಕಳಲ್ಲಿ ಉತ್ಸಾಹ ತುಂಬುವುದಾಗಿದೆ. ಯೋಜನೆಯ ಲಾಭವು ನೇರವಾಗಿ ಮಕ್ಕಳಿಗೆ ತಲುಪುವುದರಿಂದ ಔಚಿತ್ಯಪೂರ್ಣವಾಗಿದ್ದು, ಪೋಷಕರು ಹಾಗೂ ಸಮುದಾಯದ ಸಹಕಾರವನ್ನು ಸಹಗಳಿಸಬಹುದಾಗಿದೆ ಎಂದು ಅಭಿಪ್ರಾಯ ಪಟ್ಟು ಒಮ್ಮತದಿಂದ ಈ ಕಾರ್ಯಕ್ರಮವನ್ನು ಅನುಮೋದಿಸಲಾಗಿದೆ.

## ಯೋಜನೆಯ ಆಯವ್ಯಯ

೨೦೦೯-೧೦ನೇ ಸಾಲಿನ ಜಿಲ್ಲೆಗಳ ಸರ್ವ ಶಿಕ್ಷಣ ಅಭಿಯಾನದ AWP&B ಯಲ್ಲಿನ 'Innovative Activity for SC/ST' ಚಟುವಟಿಕೆಯಡಿಯಲ್ಲಿ ಪ್ರತಿ ಜಿಲ್ಲೆಗೆ ರೂ.೧೫ಲಕ್ಷಗಳು ಅನುಮೋದನೆಯಾಗಿರುತ್ತದೆ.

ಒಟ್ಟಾರೆ ರಾಜ್ಯಕ್ಕೆ ರೂ. ೪೩೫ ಲಕ್ಷಗಳು. ಇದನ್ನು ವಲಯವಾರು ಮರು ಹೊಂದಾಣಿಕೆ ಮಾಡಲಾಗುತ್ತದೆ. ಪ್ರತಿ ೫೦ ಮಕ್ಕಳು ಹಾಗೂ ೪ ಶಿಕ್ಷಕರನ್ನು ಒಳಗೊಂಡ ತಂಡಕ್ಕೆ ಸೀಮಿತ ಅನುದಾನ : ೨೫,೦೦೦. ವಲಯವಾರು ಕನಿಷ್ಠ ೮ ತಂಡಗಳ ಪ್ರವಾಸ ಹಮ್ಮಿಕೊಳ್ಳುವುದು. ಒಟ್ಟು ೨೦೨ ವಲಯಗಳಿಂದ ೧೬೧೬ ತಂಡಗಳು ಪ್ರವಾಸಕ್ಕೆ ಒಳಪಡುವುವು. ಹಾಗೂ ಹೆಚ್ಚುವರಿಯಾಗಿ ಈ ಕೆಳಕಂಡ ವಲಯಗಳಲ್ಲಿ ಎಸ್.ಸಿ./ಎಸ್.ಟಿ ಮಕ್ಕಳ ದಾಖಲಾತಿ(ಡೈಸ್೨೦೦೮) ಹೆಚ್ಚಿರುವ ಹಿನ್ನೆಲೆಯಲ್ಲಿ ಅಂತಹ ಈ ಕೆಳಗಿನ ಹೆಚ್ಚುವರಿ ಪ್ರತಿ ವಲಯದಿಂದ ೩ ತಂಡಗಳಲ್ಲಿ ಪ್ರವಾಸ ಆಯೋಜಿಸುವುದು. ೩ ತಂಡಗಳ ಪ್ರವಾಸವನ್ನು ಶೈಕ್ಷಣಿಕ ವಲಯಗಳಾದ ಬಳ್ಳಾರಿ ಪೂರ್ವ, ಬಳ್ಳಾರಿ ಪಶ್ಚಿಮ, ಹೊಸಪೇಟೆ, ಕೂಡ್ಲಗಿ, ಸಂಡೂರು, ಔರಾದ, ಬಸವಕಲ್ಯಾಣ, ಹಮ್ನಾಬಾದ್, ಬಿಜಾಪುರ ಗ್ರಾಮೀಣ, ಸಿಂಧಗಿ, ಚಿಂತಾಮಣಿ, ಗೌರಿಬಿದನೂರು, ಹುಕ್ಕೇರಿ, ಚಳ್ಳಕೆರೆ, ಚಿತ್ರದುರ್ಗ, ಹಿರಿಯೂರು, ಮೊಳಕಾಲ್ಮೂರು, ಚನ್ನಗಿರಿ, ಆಳಂದ, ಚಿತ್ತಾಪುರ, ಕೋಲಾರ, ಗಂಗಾವತಿ, ಕೊಪ್ಪಳ, ಪಾವಗಡ, ಸಿರಾ, ಹೆಚ್.ಡಿ.ಕೋಟೆ, ಮೈಸೂರು ಗ್ರಾಮಾಂತರ, ನಂಜನಗೂಡು, ಟಿ.ಎನ್.ಪುರ, ದೇವದುರ್ಗ, ಲಿಂಗಸುಗೂರು, ಮಾನ್ವಿ, ರಾಯಚೂರು, ಸಿಂಧನೂರು, ತುಮಕೂರು, ಶಹಪೂರ, ಶೋರಾಪುರ ಮತ್ತು ಯಾದಗಿರಿ ಯಲ್ಲಿ ಆಯೋಜಿಸುವುದು.

ಒಟ್ಟಾರೆ ೨೦೦೯-೧೦ನೇ ಸಾಲಿನಲ್ಲಿ ೧೭೩೦ ತಂಡಗಳ ಚಿಣ್ಣರ ಜಿಲ್ಲಾ ದರ್ಶನ ಪ್ರವಾಸ ಅನುಷ್ಠಾನಗೊಳಿಸುವುದು.

## ಘಟಕವೆಚ್ಚದ ವಿವರ:

- ರೂ. ೨೫,೦೦೦/- ಅನುದಾನದ ಚಟುವಟಿಕೆವಾರು ವಿವರ ಈ ಕೆಳಕಂಡಂತೆ ಇರುತ್ತದೆ.
- ಕೆ.ಎಸ್.ಆರ್.ಟಿ.ಸಿ ಬಸ್ ಟ್ರಾನ್ಸಪೋರ್ಟೇಷನ್ ವೆಚ್ಚ (ಅಂದಾಜು ದೂರ ೬೦೦ ಕಿ.ಮೀ ಗೆ ೨೨ ರೂ.ನಂತೆ ೫೫ ಸೀಟರ್ ಬಸ್, ೨ ದಿನಗಳಿಗೆ - ಅಂದಾಜು ಅನುದಾನ ರೂ. ೧೩,೨೦೦/-
- ಊಟ ೫೫ ಜನರಿಗೆ (೫೦ ಮಕ್ಕಳು ಹಾಗೂ ೪ ಶಿಕ್ಷಕರು+ ಚಾಲಕ) - ೨ ದಿನಗಳಿಗೆ- ಅಂದಾಜು ಅನುದಾನ ರೂ. ೬೦೦೦/-
- ಒಂದು ರಾತ್ರಿಯ ಉಳಿಯುವಿಕೆಗೆ ( ಡಾರ್ಮೆಟ್ರಿ ಗಾಗಿ) ೫೫ ಜನರಿಗೆ - ಅಂದಾಜು ಅನುದಾನ ರೂ. ೧೫೦೦/-
- ವಿವಿಧ ಸ್ಥಳಗಳ ಪ್ರವೇಶ ಶುಲ್ಕ (ವಿನಾಯಿತಿ ಪಡೆಯಲು ಮೊದಲೆ ಅನುಮತಿ ಪಡೆದಿರಬೇಕು), ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ - ಅಂದಾಜು ಅನುದಾನ ರೂ. ೫೦೦/-, ಬಸ್ ಹಾಲ್ಟಿಂಗ್ ಫೀ - ಅಂದಾಜು ಅನುದಾನ ರೂ. ೧೦೦/-
- ಡ್ರೈವರ್ ಬಾಟ & ಇನ್ಸಷೂರನ್ಸ್- ಅಂದಾಜು ಅನುದಾನ ರೂ. ೬೦೦/-
- ೫೪ ಜನರಿಗೆ (ನೋಟ್ ಬುಕ್, ಕ್ಯಾಪ್ಸ್, ಪೆನ್ಸ್) - ಅಂದಾಜು ಅನುದಾನ ರೂ. ೧೫೦೦/-
- ಚಿಣ್ಣರ ಜಿಲ್ಲಾ ದರ್ಶನ ಕೈಪಿಡಿ ೫೫ ಪುಸ್ತಕಗಳಿಗೆ - ಅಂದಾಜು ಅನುದಾನ ರೂ. ೧೧೦೦/- (ಡಯಟ್ ತಯಾರಿಸಿದಂತಹ ಕೈಪಿಡಿಯ ಮುದ್ರಣವನ್ನು ಉಪನಿರ್ದೇಶಕರು ನಿಯಮಾನುಸಾರ ಮುದ್ರಿಸುವುದು)
- ದಾಖಲೀಕರಣ - ರೂ.೩೦೦/-
- ಔಷಧಿ- ರೂ. ೨೦೦/-
- ಮೇಲಿನ ಘಟಕ ವೆಚ್ಚ ಸಾಂಕೇತಿಕವಾಗಿದ್ದು, ಮರುಹೊಂದಾಣಿಕೆ ಮಾಡಿಕೊಳ್ಳಲು ಅವಕಾಶವಿದೆ.

ಒಟ್ಟು ೫೦ ಮಕ್ಕಳು ಹಾಗೂ ೪ ಶಿಕ್ಷಕರಿಗೆ ೨ ದಿನದ ಪ್ರವಾಸಕ್ಕೆ ಗರಿಷ್ಠ ವೆಚ್ಚ ಮಾಡಬಹುದಾದ ಅನುದಾನ: ೨೫೦೦೦/-. (ಪ್ರತಿ ಮಗುವಿಗೆ ತಗಲುವ ಅಂದಾಜು ವೆಚ್ಚ ರೂ. ೫೦೦/-)

## ಜಿಲ್ಲಾ ಚಿಣ್ಣರ ಕರ್ನಾಟಕ ದರ್ಶನವನ್ನು ಎರಡು ದಿನಗಳು ಆಯೋಜಿಸುವುದು.

## ಅನುಷ್ಠಾನಕ್ಕೆ ಸಂಬಂಧಿಸಿದ ಅಂಶಗಳು:

ಜಿಲ್ಲಾ ಹಂತದಲ್ಲಿ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಚಿಣ್ಣರ ಜಿಲ್ಲಾ ದರ್ಶನ ಸಮನ್ವಯ ಸಮಿತಿಯನ್ನು ರಚಿಸುವುದು.(ಜಿಲ್ಲಾ ಉಪನಿರ್ದೇಶಕರು(ಆ) - ಸದಸ್ಯ ಕಾರ್ಯದರ್ಶಿಗಳು, ಡಯಟ್ ಪ್ರಾಂಶುಪಾಲರು- ಉಪಾಧ್ಯಕ್ಷರು, ಜಿಲ್ಲಾ ಉಪಯೋಜನಾ ಸಮನ್ವಯ ಅಧಿಕಾರಿ- ಸ.ಶಿ.ಅ, ಡಯಟ್‌ನ ಸಿ.ಎಂ.ಡಿ.ಇ ವಿಭಾಗದ ಮುಖ್ಯಸ್ಥರು, ಆಯಾ ಜಿಲ್ಲೆಯ ಎಲ್ಲಾ ಶೈಕ್ಷಣಿಕ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಎಲ್ಲಾ ತಾಲ್ಲೂಕಿನ ತಹಸಿಲ್ದಾರ್ ಕೆ.ಎಸ್.ಆರ್.ಟಿ.ಸಿ ಪ್ರತಿನಿಧಿ, ಆರ್.ಟಿ.ಓ ಪ್ರತಿನಿಧಿ, ಪ್ರಾಚ್ಯವಸ್ತು ಇಲಾಖೆಯ ಅಧಿಕಾರಿಗಳು, ಪ್ರತಿ ತಾಲ್ಲೂಕಿನಿಂದ ಒಂದು ಸ್ವಯಂ ಸೇವಕ ಸಂಘದ ಪ್ರತಿನಿಧಿ, ಜಿಲ್ಲಾ ಕೆ.ಎಸ್.ಟಿ.ಡಿ.ಸಿ

ಪ್ರತಿನಿಧಿ ಒಳಗೊಂಡಂತೆ ರಚಿಸುವುದು). ಜಿಲ್ಲೆಯ ಎಲ್ಲಾ ವಲಯಗಳ ಜಿಲ್ಲಾ ದರ್ಶನಕ್ಕೆ ಸಂಬಂಧಿಸಿದಂತೆ ತಾಲ್ಲೂಕುವಾರು ಕ್ರಿಯಾ ಯೋಜನೆಯನ್ನು ಅನುಮೋದಿಸುವುದು ಹಾಗೂ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಮನ್ವಯ ಕಾರ್ಯ ನಿರ್ವಹಿಸುವುದು.

ತಾಲ್ಲೂಕು ಹಂತದಲ್ಲಿ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಯ ಅಧ್ಯಕ್ಷತೆಯಲ್ಲಿ ಚಿಣ್ಣರ ಜಿಲ್ಲಾ ದರ್ಶನ ಅನುಷ್ಠಾನ ಸಮಿತಿಯನ್ನು ರಚಿಸುವುದು (ಸದಸ್ಯರುಗಳು: ಕ್ಷೇತ್ರ ಶಿಕ್ಷಣಾಧಿಕಾರಿಗಳು, ಬಿ.ಆರ್.ಸಿ, ತಾಲ್ಲೂಕು ಪಂಚಾಯಿತಿ ಪ್ರತಿನಿಧಿ, ಕೆ.ಎಸ್.ಆರ್.ಟಿ.ಸಿ ಪ್ರತಿನಿಧಿ, ಪ್ರಾಚ್ಯವಸ್ತು ಇಲಾಖೆಯ ಅಧಿಕಾರಿಗಳು, ಆರ್.ಟಿ.ಓ ಪ್ರತಿನಿಧಿ, ೧ ಸಿ.ಎ.ಈ.ಓ ಒಳಗೊಂಡಂತೆ ರಚಿಸುವುದು). ಹಾಗೂ ಪ್ರತಿ ಶೈಕ್ಷಣಿಕ ವಲಯದಲ್ಲಿ ಪ್ರತಿ ತಂಡ ಪ್ರವಾಸ ಹೊರಡುವಲ್ಲಿ ಮಕ್ಕಳ ಆಯ್ಕೆ, ರೂಟ್ ಮ್ಯಾಪ್ ತಯಾರಿಕೆ, ತಂಡದ ಇನ್ಸೂರೆನ್ಸ್ ಮಾಡಿಸುವುದು, ಊಟ, ವಸತಿ, ಒಟ್ಟಾರೆ ಕ್ರಿಯಾ ಯೋಜನೆ ತಯಾರಿಕೆಯಿಂದ ಹಿಡಿದು ಅನುಷ್ಠಾನದವರೆವಿಗೂ ಈ ಸಮಿತಿ ಕಾರ್ಯ ನಿರ್ವಹಿಸುತ್ತದೆ. ಯಾವುದೇ ಕಾರಣಕ್ಕೂ ವಸತಿಗೆ ಯೋಗ್ಯವಿಲ್ಲದ ಸ್ಥಳಗಳಲ್ಲಿ ಮಕ್ಕಳಿಗೆ ವಸತಿ ವ್ಯವಸ್ಥೆ ಮಾಡುವಂತಿಲ್ಲ.

## ವಿದ್ಯಾರ್ಥಿಗಳ ಹಾಗೂ ಮೇಲ್ವಿಚಾರಕರ ಆಯ್ಕೆಗೆ ಮಾನದಂಡಗಳು

### ವಿದ್ಯಾರ್ಥಿಗಳನ್ನು ಆಯ್ಕೆ

ಪ್ರತಿ ಬ್ಲಾಕ್‌ಗೆ ೮ ಅಥವಾ ಹೆಚ್ಚಿನ ತಂಡಗಳಂತೆ ಹಾಗೂ ಪ್ರತಿ ತಂಡದಲ್ಲಿ ೫೦ ಮಕ್ಕಳಿರುವಂತೆ ಪ್ರವಾಸ ತಂಡಗಳನ್ನು ರಚಿಸಬೇಕು. ಹಾಗಾಗಿ ಪ್ರತಿ ಬ್ಲಾಕ್ ನಿಂದ ಕನಿಷ್ಠ ೪೦೦ ಮಕ್ಕಳಿಗೆ ಪ್ರವಾಸ ಹಮ್ಮಿಕೊಳ್ಳುವುದು. ಇನ್ನೂ ಹೆಚ್ಚಿನ ತಂಡಗಳನ್ನು ಸಹ ಆಯೋಜಿಸಬಹುದಾಗಿದೆ. (ಹೆಚ್ಚುವರಿಯಾಗಿ ಆಯ್ಕೆಯಾಗಿರುವ ೩೮ ಬ್ಲಾಕ್‌ಗಳಲ್ಲಿ ಹೆಚ್ಚುವರಿ ಕನಿಷ್ಠ ೩ ತಂಡಗಳು -೧೫೦ ವಿದ್ಯಾರ್ಥಿಗಳು, ಅಂದರೆ ಈ ಬ್ಲಾಕ್ ನಲ್ಲಿ ಒಟ್ಟಾರೆಯಾಗಿ ಕನಿಷ್ಠ ೧೧ ಅಥವಾ ಹೆಚ್ಚಿನ ತಂಡಗಳಂತೆ ಹಾಗೂ ಕನಿಷ್ಠ ೫೫೦ ಮಕ್ಕಳು ಒಳಗೊಂಡಂತೆ ಪ್ರವಾಸ ಹಮ್ಮಿಕೊಳ್ಳುವುದು).

***ವಿಶೇಷ ಸೂಚನೆ: ಖಂಡಿಕೆ ೧ (ಯೋಜನೆಯ ಆಯವ್ಯಯ) ರ ಘಟಕ ವೆಚ್ಚ (೫೦ ಮಕ್ಕಳ ಒಂದು ತಂಡಕ್ಕೆ ರೂ. ೨೫,೦೦೦) ದಲ್ಲಿ ಉಳಿಕೆ ಆದಲ್ಲಿ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳಿಗೆ ಪ್ರವಾಸ ಹಮ್ಮಿಕೊಳ್ಳುವುದು.***

- ೫, ೬ ಮತ್ತು ೭ನೇ ತರಗತಿಯ ಮಕ್ಕಳನ್ನು ಸದರಿ ಕಾರ್ಯಕ್ರಮಕ್ಕೆ ಆಯ್ಕೆ ಮಾಡುವುದು.
- ಆಯಾ ಶೈಕ್ಷಣಿಕ ವಲಯ ದ ೫, ೬ ಮತ್ತು ೭ನೇ ತರಗತಿಯಲ್ಲಿ ಎಲ್ಲ ಮಕ್ಕಳ ಒಟ್ಟು ಸಂಖ್ಯೆಯಲ್ಲಿ ೭೫% ಎಸ್.ಸಿ./ಎಸ್.ಟಿ ಹಾಗೂ ೨೫% ಪ್ರತಿಭಾನ್ವಿತ ಮಕ್ಕಳನ್ನು ಜಿಲ್ಲಾ ಚಿಣ್ಣರ ದರ್ಶನಕ್ಕೆ ಆಯ್ಕೆ ಮಾಡುವುದು. ಶೇಕಡಕ್ಕೆ ಅನುಗುಣವಾಗಿ ಪೂರ್ಣ ಪ್ರಮಾಣದಲ್ಲಿ ಹೆಣ್ಣು ಮಕ್ಕಳನ್ನು ಸದರಿ ಕಾರ್ಯಕ್ರಮಕ್ಕೆ ಒಳಪಡಿಸುವುದು.
- ಯಾವುದೇ ಸಾಂಕ್ರಾಮಿಕ ಕಾಯಿಲೆಗಳಿಂದ ಹಾಗೂ ದೀರ್ಘಕಾಲಿಕ ಕಾಯಿಲೆಗಳಿಂದ ನರಳುತ್ತಿರುವವರನ್ನು ಕರೆತರಬಾರದು.
- ಆರೋಗ್ಯಕರವಾಗಿರುವ ಮಕ್ಕಳನ್ನು ಆಯ್ಕೆಮಾಡುವುದು.
- ತಂದೆ ತಾಯಿಗಳಿಂದ ಒಪ್ಪಿಗೆ ಪತ್ರ ಪಡೆಯುವುದು.
- ಜಿಲ್ಲಾ ದರ್ಶನಕ್ಕೆ, ಮಕ್ಕಳನ್ನು ಆಯ್ಕೆ ಮಾಡುವಲ್ಲಿ ಪ್ರತಿ ತಾಲ್ಲೂಕಿನಿಂದ ಆಯ್ಕೆ ಮಾಡಲು ತಾಲ್ಲೂಕು ಸಮಿತಿಯನ್ನು ಬಿ.ಇ.ಓ, ಬಿ.ಆರ್.ಸಿ, ತಾಲ್ಲೂಕು ಪಂಚಾಯತ್‌ನ ಒಬ್ಬರು ಸದಸ್ಯರು ಹಾಗೂ ಒಂದು ಸ್ವಯಂಸೇವಕ ಸಂಘದ ಪ್ರತಿನಿಧಿಯನ್ನು ಒಳಗೊಂಡಂತೆ ರಚಿಸಿ ಮೇಲಿನ ಮಾನದಂಡದಂತೆ ಆಯ್ಕೆ ಮಾಡುವುದು.

## ಶಿಕ್ಷಕರನ್ನು ಆಯ್ಕೆ ಮಾಡಲು ನಿಗದಿಪಡಿಸಿರುವ ಮಾನದಂಡಗಳು

- ತಂಡದಲ್ಲಿ ಕಡ್ಡಾಯವಾಗಿ ಇಬ್ಬರು ಪುರುಷ ಶಿಕ್ಷಕರು ಹಾಗೂ ಇಬ್ಬರು ಮಹಿಳಾ ಶಿಕ್ಷಕರಿರಬೇಕು.
- ಈ ಪೈಕಿ ಒಬ್ಬರು ಸ್ಕೌಟ್ಸ್ & ಗೈಡ್ಸ್ ತರಬೇತಿ ಹೊಂದಿದ ಶಿಕ್ಷಕರಾಗಿರಬೇಕು.
- ಒಬ್ಬರು ವಿಜ್ಞಾನ ಹಾಗೂ ಒಬ್ಬರು ಕಲಾ ಶಿಕ್ಷಕರಾಗಿರಬೇಕು.
- ಪ್ರಥಮ ಚಿಕಿತ್ಸೆ ಜ್ಞಾನವನ್ನು ಹೊಂದಿರಬೇಕು.
- ಆರೋಗ್ಯವಂತ ಕ್ರಿಯಾಶೀಲ ಉತ್ಸಾಹಿ ಶಿಕ್ಷಕರಾಗಿರಬೇಕು.
- ೫೦ ವರ್ಷಕ್ಕಿಂತ ಕಡಿಮೆ ವಯೋಮಾನದವರಾಗಿರಬೇಕು.
- ಪ್ರವಾಸ ಹೋಗುವ ಸ್ಥಳದ ಪರಿಚಯವನ್ನು ಮನಗಂಡಿರಬೇಕು.
- ಪ್ರತಿ ತಂಡಕ್ಕೂ ಬೇರೆ ಬೇರೆ ಶಿಕ್ಷಕರನ್ನು ಆಯ್ಕೆ ಮಾಡಬೇಕು.

## ಮುದ್ರಣಕ್ಕೆ ಸೂಚನೆ

ಕವರ್ ಪೇಜ್ ಮುಂಭಾಗ - ಮೇಲೆ ಸಣ್ಣ ಫಾಂಟ್‌ನಲ್ಲಿ ಚಿಣ್ಣರ ಕರ್ನಾಟಕ ದರ್ಶನ ಮಾಲಿಕೆ …….(ನಿಮ್ಮ ಜಿಲ್ಲೆಯ ಕೋಡ್ ನಮೂದಿಸುವುದು) ಪಟ್ಟಿ ಲಗತ್ತಿಸಿದೆ. ಮಧ್ಯದಲ್ಲಿ ಚಿಣ್ಣರ ಜಿಲ್ಲಾ ದರ್ಶನ …………… (ನಿಮ್ಮ ಜಿಲ್ಲೆ ಹೆಸರು ನಮೂದಿಸುವುದು)

ಕವರ್ ಪೇಜ್ ಹಿಂಭಾಗ - ಜಿಲ್ಲೆಯ ಪ್ರಮುಖ ಸ್ಥಳಗಳ ಚಿತ್ರ/ಟಿಪ್ಪಣಿ

ಪುಟ II - ಕವರ್ ಪೇಜ್ ಮುಂಭಾಗದಲ್ಲಿ ಇರುವಂತೆ.

ಪುಟ III - ಕರ್ನಾಟಕದ ನಕ್ಷೆ ಚಿಕ್ಕದಾಗಿ ಹಾಕಿ ಆಯಾ ಜಿಲ್ಲೆಯ ನಕ್ಷೆ ದೊಡ್ಡದಾಗಿ ಹಾಕುವುದು.

ಪುಟ III/Iv -ಮುನ್ನುಡಿ(ಸಿಇಓ, ಡಿಡಿಪಿಐ ಹಾಗೂ ಡಯಟ್ ಪ್ರಾಂಶುಪಾಲರ ಸಹಿಯೊಂದಿಗೆ)

ಪುಟ v - ಜಿಲ್ಲೆಯ ವಿಳಾಸ ದೂರವಾಣಿ ಸಂಖ್ಯೆಯೊಂದಿಗೆ

ಪುಟ vi /vii - ಪ್ರವಾಸದ ಪ್ರಾಮುಖ್ಯತೆ, ಆಯ್ಕೆ ಮನದಂಡ ಇತ್ಯಾದಿ(೦೨ ಪುಟಗಳು)

ಪುಟ vIII - ಜಿಲ್ಲೆಯ ಇತಿಹಾಸ

ಗರಿಷ್ಠ ೭೮ ಪುಟಗಳು

## ಸ್ಪೆಸಿಫಿಕೇಶನ್:

ಅಳತೆ - ೧/೮ ಡೆಮ್ಮಿ(ಬಿ/ಬಿ)

ಕವರ್ ಪೇಜ್ - ೨೨೦ ಜಿ.ಎಸ್.ಎಂ. ಪಾರಿನ್ ಆರ್ಟ್ ಪೇಪರ್

ಬಣ್ಣ - ಎಲ್ಲಾ ಪುಟಗಳು ಬಹು ವರ್ಣ

ಒಳ ಪುಟಗಳು - ೮೦ ಜಿ.ಎಸ್.ಎಂ. - ಮ್ಯಾಪ್ಲಿಥೋ

ಒಟ್ಟು ಪ್ರತಿಗಳು - ಪ್ರವಾಸ ಹೋಗುವ ಮಕ್ಕಳಿಗೆ ಒಂದೊಂದು ಪ್ರತಿ + ಡಿಡಿಪಿಐ/ಡಿವೈಪಿಸಿ/ಡಯಟ್/ಬಿಇಓ/ ಬಿ.ಆರ್.ಸಿ.(ತಲಾ ೦೩ ಪ್ರತಿ) + ಸಿಎಇಓ (ತಲಾ ೦೧ ಪ್ರತಿ) + ಹೆಚ್ಚುವರಿ(೧%)

ಬೈಂಡಿಂಗ್ - ಸೆಂಟ್ರಲ್ ಪಿನ್ನಿಂಗ್ ಮತ್ತು ಎರಡೂ ಕಡೆ ಪಿನ್.

ಮುದ್ರಣ ಜವಾಬ್ದಾರಿ ಕಂದಾಯ ಜಿಲ್ಲೆಯ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳದ್ದಾಗಿರುತ್ತದೆ. ಶೈಕ್ಷಣಿಕ ಜಿಲ್ಲೆಗಳಾಗಿ ಮಾರ್ಪಟ್ಟಿರುವ ಜಿಲ್ಲೆಗಳಾದ ರಾಮನಗರ-ಬೆಂಗಳೂರು ಗ್ರಾಮಾಂತರ ಕ್ಕೆ ಸಂಬಂಧಿಸಿದಂತೆ ಬೆಂಗಳೂರು ಗ್ರಾಮಾಂತರ, ಬೆಂಗಳೂರು ದಕ್ಷಿಣ-ಬೆಂಗಳೂರು ಉತ್ತರಕ್ಕೆ ಸಂಬಂಧಿಸಿದಂತೆ ಬೆಂಗಳೂರು ಉತ್ತರ, ಚಿಕ್ಕೋಡಿ-ಬೆಳಗಾಂ ಗೆ ಸಂಬಂಧಿಸಿದಂತೆ ಬೆಳಗಾಂ, ಗುಲ್ಬರ್ಗ-ಯಾದಗಿರಿಗೆ ಸಂಬಂಧಿಸಿದಂತೆ ಗುಲ್ಬರ್ಗ, ತುಮಕೂರು-ಮಧುಗಿರಿಗೆ ಸಂಬಂಧಿಸಿದಂತೆ ತುಮಕೂರು ಜಿಲ್ಲೆಗಳು ಮುದ್ರಿಸುವುದು. ಇದಕ್ಕೆ ಸಂಬಂಧಿಸಿದಂತೆ ಮುದ್ರಣ ಘಟಕವೆಚ್ಚವನ್ನು ಮೇಲೆ ಸೂಚಿಸಿದ ಜಿಲ್ಲೆಗಳು ಭರಿಸುವುದು.

ವಿಶೇಷ ಸೂಚನೆ: ಮಕ್ಕಳ ಅನುಪಾತಕ್ಕೆ ಸಂಬಂಧಿಸಿದಂತೆ ಕೈಪಿಡಿಯನ್ನು ಮುದ್ರಿಸಿ ಪ್ರವಾಸಕ್ಕೆ ಹೊರಡುವ ಮಕ್ಕಳಿಗೆ ಕಡ್ಡಾಯವಾಗಿ ಪ್ರವಾಸದ ದಿನ ನೀಡುವುದು. ಹೆಚ್ಚುವರಿಯಾಗಿ ಕೈಪಿಡಿಯ ೧೦೦ ಪ್ರತಿಗಳನ್ನು ಸ.ಶಿ.ಅ ರಾಜ್ಯಕಛೇರಿಗೆ ಹಾಗೂ ೨೫ ಪ್ರತಿಗಳನ್ನು (ಡಯಟ್ ಮತ್ತು ಬಿ.ಆರ್.ಸಿ ಕೇಂದ್ರಗಳಿಗೆ) ನೀಡಲು ಮುದ್ರಿಸಿ ತಲುಪಿಸುವುದು.

## ಚಿಣ್ಣರ ಜಿಲ್ಲಾ ದರ್ಶನದ ವೇಳಾಪಟ್ಟಿ

೧. ಮುದ್ರಣ ಕಾರ್ಯ ಅಂತಿಮಗೊಳಿಸುವ ದಿನಾಂಕ : ೨೦-೦೮-೨೦೦೯.
೨. ಚಿಣ್ಣರ ಜಿಲ್ಲಾ ದರ್ಶನ ಪ್ರವಾಸ ಆರಂಭ- ೧೫-೦೯-೨೦೦೯
೩. ಚಿಣ್ಣರ ಜಿಲ್ಲಾ ದರ್ಶನ ಪ್ರವಾಸ ಮುಕ್ತಾಯ- ೩೧-೧೨-೨೦೦೯.
೪. ವಲಯವಾರು ದಾಖಲೀಕರಣ ಮಾಡಿ ಪ್ರತಿಯನ್ನು ಜಿಲ್ಲಾ ಸ.ಶಿ.ಅ ಕಛೇರಿಗೆ ಒದಗಿಸುವ ದಿನಾಂಕ- ೧೦-೦೧-೨೦೧೦.
೫. ಜಿಲ್ಲಾ ಕಛೇರಿಯಿಂದ ಕ್ರೋಢೀಕರಣ ವರದಿ, ವೆಚ್ಚದ ವಿವರ, ಪ್ರವಾಸಕ್ಕೆ ಹೊರಟ ಮಕ್ಕಳ ವಿವರ ( ವರ್ಗವಾರು ಕೋಢೀಕರಣ ನೀಡುವುದು) ಹಾಗೂ ದಾಖಲೀಕರಣದ ಪ್ರತಿ ಸಲ್ಲಿಸುವ ದಿನಾಂಕ: ೩೧-೧-೨೦೧೦.

## ಜಿಲ್ಲಾವಾರು ಪ್ರವಾಸದ ಅನುದಾನದ ವಿವರ ಲಗತ್ತಿಸಿದೆ:
## ಅದರಂತೆ ಜಿಲ್ಲೆಗಳಿಗೆ ರಾಜ್ಯ ಕಛೇರಿಯಿಂದ ಬಿಡುಗಡೆ ಮಾಡಲಾಗುವುದು.

ರಾಜ್ಯ ಯೋಜನಾ ನಿರ್ದೇಶಕರು
ಸರ್ವ ಶಿಕ್ಷಣ ಅಭಿಯಾನ

ಪ್ರತಿಗಳು ಕ್ರಮಕ್ಕಾಗಿ:

೧. ರಾಜ್ಯದ ಎಲ್ಲಾ ಜಿಲ್ಲೆಯ ಉಪನಿರ್ದೇಶಕರು ( ಆಡಳಿತ) ಮತ್ತು ಉಪನಿರ್ದೇಶಕರು ( ಅಭಿವೃದ್ಧಿ).
೨. ರಾಜ್ಯದ ಎಲ್ಲಾ ಜಿಲ್ಲೆಯ ಜಿಲ್ಲಾ ಉಪಯೋಜನಾ ಸಮನ್ವಯ ಅಧಿಕಾರಿಗಳು, ಸ.ಶಿ.ಅ.
೩. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣ ಅಧಿಕಾರಿಗಳು.

ಪ್ರತಿಗಳು ಮಾಹಿತಿಗಾಗಿ:

೧. ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ, ಬಹುಮಹಡಿಯ ಕಟ್ಟಡ, ಬೆಂಗಳೂರು.
೨. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು

೩.	ಅಪರ ಆಯುಕ್ತರು, ಗುಲ್ಬರ್ಗಾ ಹಾಗೂ ಧಾರವಾಡ ಆಯುಕ್ತಾಲಯ.

೪.	ರಾಜ್ಯ ಯೋಜನಾ ನಿರ್ದೇಶಕರ ಆಪ್ತ ಶಾಖೆಗೆ ಮಾಹಿತಿಗಾಗಿ.

೫.	ಈ ಕಚೇರಿಯ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿಗಾಗಿ.

* * *